ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 12 ಮಾರ್ಚಿ 21, 1982 ಬೆಲೆ 60 ಪೈಸೆ

ಸಂಪಾದಕೀಯ

ಎರಡು ನೀತಿ

ಕೇರಳದಲ್ಲಿ ಬಹುಮತವಿಲ್ಲದಿದ್ದಾಗ್ಯೂ ಅಧಿಕಾರಕ್ಕೆ ಬಂದು ಪಕ್ಷಾಂತರದ ಮೂಲಕ ಬಹುಮತ ಪಡೆಯಲು ಯತ್ನಿಸಿದರೂ ಸಫಲವಾಗದೆ, ಸಭಾಧ್ಯಕ್ಷರ ಮತದಿಂದಲೇ ಅಧಿಕಾರ ಉಳಿಸಿಕೊಂಡ ಕಾಂಗ್ರೆಸ್ (ಐ) ಮುಖಂಡ ಕರುಣಾಕರನ್ ನೇತೃತ್ವದ ಮಂತ್ರಿಮಂಡಲವು ಬಹುಮತವನ್ನು ಕಳೆದುಕೊಂಡಿತು. ಮಾಣಿ ಕಾಂಗ್ರೆಸ್ ಶಾಸಕ ಲೋನಪ್ಪನ್ ನಂಬದನ್ ಅವರು ಪಕ್ಷಕ್ಕೆ ರಾಜಿನಾಮೆ ಇತ್ತು, ಕರುಣಾಕರನ್ ಮಂತ್ರಿಮಂಡಲಕ್ಕೆ ಕೊಟ್ಟಿದ್ದ ಬೆಂಬಲವನ್ನು ಹಿಂತೆಗೆದುಕೊಂಡಿದ್ದರ ಪರಿಣಾಮ ಕರುಣಾಕರನ್ ಮಂತ್ರಿ ಮಂಡಲ ಅಧಿಕಾರಕ್ಕೆ ಬಂದಷ್ಟೆ ಶೀಘ್ರ ಅಧಿಕಾರ ಕಳೆದುಕೊಳ್ಳುವಂತಾಯಿತು. ಈಗ ವಿಧಾನ ಸಭೆಯನ್ನು ವಿಸರ್ಜಿಸಿ, ರಾಷ್ಟ್ರಾಧ್ಯಕ್ಷರ ಆಡಳಿತವನ್ನು ಘೋಷಿಸಲಾಗಿದೆ. ಬದಲೀ ಸರ್ಕಾರ ರಚಿಸುವ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸದೆ, ಬಹುಮತ ಕಳೆದುಕೊಂಡಿರುವ ಕರುಣಾಕರನ್ ಮಂತ್ರಿ ಮಂಡಲದ ಸಲಹೆ ಮೇರೆಗೆ ವಿಧಾನಸಭೆಯನ್ನು ವಿಸರ್ಜಿಸಿರುವ, ರಾಜ್ಯಪಾಲರುವರ ಕ್ರಮವನ್ನು ವಿರೋಧ ಪಕ್ಷಗಳು ಖಂಡಿಸಿವೆ.

ಇ. ಕೆ. ನಾಯನಾರ್ ಮಂತ್ರಿ ಮಂಡಲ ರಾಜೀನಾಮೆ ಕೊಡುವ ಸಂದರ್ಭದಲ್ಲೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮತ್ತು ಇತರೆ ಕೆಲವು ಪಕ್ಷಗಳು ಚುನಾವಣೆ ನಡೆಸುವುದೇ ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದವು. ಈಗಲೂ ರಾಷ್ಟ್ರಾಧ್ಯಕ್ಷರ ಆಳ್ವಿಕೆಯ ಹೆಸರಿನಲ್ಲಿ ಕಾಂಗ್ರೆಯ ಪಿತೂರಿಯನ್ನು ಜಾರಿಗೊಳಿಸುವ ಸನ್ನಾಹ ನಡೆದಿದೆ. ಇದು ಸರಿ ಇಲ್ಲ. ಕೇರಳದಲ್ಲಿ ಈ ಕೂಡಲೇ ಚುನಾವಣೆ ನಡೆಸಬೇಕು. ಅದಕ್ಕಾಗಿ ಕೇರಳದಲ್ಲಿ ಹಾಗೂ ರಾಷ್ಟ್ರದಾದ್ಯಂತ ಎಡ ಪ್ರಜಾಪ್ರಭುತ್ವ ಶಕ್ತಿಗಳು ಒತ್ತಾಯವನ್ನು ತರಬೇಕು.

ಕೇರಳದಲ್ಲಿ ರಾಜ್ಯಪಾಲೆ ಈಗ ಅನುಸರಿಸಿರುವ ನೀತಿ, ಅಸ್ಸಾಮಿನಲ್ಲಿ ಸ್ವಲ್ಪ ದಿನಗಳ ಮೊದಲು ಅಲ್ಲಿಯ ರಾಜ್ಯಪಾಲರು ಅನುಸರಿಸಿದ ನೀತಿ— ಇವೆಲ್ಲಾ ಪ್ರಜಾಪ್ರಭುತ್ವ ಮತ್ತು ಸಂವಿಧಾನಾತ್ಮಕ ಧೋರಣೆಗಳು ಮತ್ತು ಮೌಲ್ಯಗಳಿಗೆ ಮಸಿ ಬಳಿಯುವಂತಿವೆ. ಕೇಂದ್ರದಲ್ಲಿರುವ ಕಾಂಗ್ರೆ ಸರ್ಕಾರದ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವುದೇ ರಾಜ್ಯಪಾಲ ಮತ್ತು ರಾಜ್ಯಪಾಲೆಯರ ಕೆಲಸವಾಗಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗಿದೆ. ಆದುದರಿಂದಲೇ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳೂ ಅದನ್ನು ಪ್ರತಿಭಟಿಸಲೇಬೇಕು. ಇಬ್ಬಗೆಯ ನೀತಿಯನ್ನು ವಿರೋಧಿಸಲೇಬೇಕು. ರಾಜ್ಯಗಳ ಅಧಿಕಾರವನ್ನು ಕಸಿದುಕೊಳ್ಳುವ ಕ್ರಮವನ್ನು ಒಗ್ಗಟ್ಟಾಗಿ ಪ್ರತಿಭಟಿಸಲೇಬೇಕು.

ಸರ್ಕಾರದ ರೈತ ವಿರೋಧಿ ನೀತಿಯ ವಿರುದ್ಧ

ಏಪ್ರಿಲ್ ೫ ರಂದು ಪ್ರತಿಭಟನಾ ದಿನಾಚರಣೆ

ಗುಂಡೂರಾವ್ ಸರ್ಕಾರದ ರೈತ ವಿರೋಧಿ ನೀತಿಯ ವಿರುದ್ಧ ಏಪ್ರಿಲ್ 5 ರಂದು ರಾಜ್ಯದಾದ್ಯಂತ ಪ್ರತಿಭಟನಾ ದಿನಾಚರಣೆ ನಡೆಸಲು ಮುಳಬಾಗಿಲಿನಲ್ಲಿ ಸೇರಿದ್ದ ಪ್ರಾಂತ ರೈತ ಸಂಘದ 7ನೇ ಸಮ್ಮೇಳನ ಠರಾವನ್ನು ಅಂಗೀಕರಿಸಿದೆ. ಠರಾವಿನ ಪೂರ್ತಿ ಪಾಠ ಇಂತಿದೆ :

"ಕಳೆದೆರಡು ವರ್ಷಗಳಲ್ಲಿ ರೈತರು ರಾಜ್ಯದಾದ್ಯಂತ ನಡೆಸಿದ ಹೋರಾಟದ ಫಲವಾಗಿ ಗುಂಡೂರಾವ್ ಸರ್ಕಾರ ರೈತರ ಸಾಲವನ್ನೆಲ್ಲ ಮನ್ನಾ ಮಾಡುವುದಾಗಿ ಸಾರಿದ್ದರೂ. ಕಳೆದೆರಡು ತಿಂಗಳಿಂದ ಮೇಲಾಧಿಕಾರಿಗಳ ಆದೇಶದ ಮೇರೆಗೆ, ಬ್ಯಾಂಕ್ ಮತ್ತು ಸೊಸೈಟಿ ಅಧಿಕಾರಿಗಳು ಹಳ್ಳಿಗಳಲ್ಲಿ ರೈತರ ಮನೆ ಹೊಕ್ಕು ಕೈಗೆ ಸಿಕ್ಕ ವಸ್ತುಗಳನ್ನೆಲ್ಲ ಜಫ್ತಿ ಮಾಡುತ್ತಿರುವ ಹೀನಾಯ ದೃಶ್ಯ ನೋಡುತ್ತಿದ್ದೇವೆ. ಸತತ ಮಳೆ ಅಭಾವದಿಂದಲೂ, ದೇಶದ ಬೆಳೆಗೆ ಸರಿಯಾದ ಬೆಲೆ ಸಿಗದಿರುವುದರಿಂದಲೂ, ರೈತ ಬ್ಯಾಂಕ್-ಸೊಸೈಟಿಗಳ ಸಾಲ ತೀರಿಸುವ ಪರಿಸ್ಥಿತಿಯಲ್ಲಿಲ್ಲದಿರುವಾಗ, ಸರಕಾರದ ಈ ಒತ್ತಾಯದ ಕ್ರಮ ಖಂಡನೀಯ."

"ಸಾರ್ವಜನಿಕರಿಗೆ ಸರಿಯಾಗಿ ವಿದ್ಯುಚ್ಛಕ್ತಿ ಒದಗಿಸುವ ಯೋಗ್ಯತೆ ರಾಜ್ಯ ಸರಕಾರಕ್ಕಿಲ್ಲದಿರುವಾಗ, ಬಳಕೆದಾರರು ಮುಂಗಡ ಡಿಪಾಜಿಟ್ ಹಣ ಕೊಡಬೇಕೆಂದು ಒತ್ತಾಯ ಮಾಡುತ್ತಿರುವುದು ಖಂಡನೀಯ."

"ಜನತೆಗೆ ಯೋಗ್ಯ ಸಾರಿಗೆ ವ್ಯವಸ್ಥೆ ಮಾಡಿಕೊಡದೆ, ಭ್ರಷ್ಟಾಚಾರ, ಅದಕ್ಷ ಆಡಳಿತೆಯಿಂದ ಹಾನಿಗೊಳಗಾದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಉಳಿಸಲು, ರಾಜ್ಯ ಸರ್ಕಾರ ಸಾರಿಗೆ ದರವನ್ನೇರಿಸಲು ನಿರ್ಧರಿಸಿದೆ."

"ಕೃಷಿ ಕೂಲಿಗಾರರನ್ನೊಳಗೊಂಡು ಇನ್ನೂ ಹಲವಾರು ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಸರ್ಕಾರ ಕನಿಷ್ಠ ವೇತನ ನಿರ್ಧರಿಸಿದ್ದು, ಅದು ಜ್ಯಾರಿಯಲ್ಲಿ ಬರುವುದು ಅತ್ಯಗತ್ಯ."

"ರೈತರಿಂದ ಒತ್ತಾಯದ ಮೂಲಕ ಸಾಲ ವಸೂಲಿ ಮಾಡುತ್ತಿರುವುದನ್ನು, ಸಾಲ ಕೊಡಲು ಅಶಕ್ತರಾದ ರೈತರಮನೆ ಜಪ್ತಿ ಮಾಡುತ್ತಿರುವುದನ್ನೂ, ಸಾರಿಗೆ ದರ ಏರಿಸಲಿರುವುದನ್ನೂ, ಕನಿಷ್ಠ ಕೂಲಿ ಸರಿಯಾಗಿ ಜ್ಯಾರಿಗೆ ತರದಿರುವುದನ್ನೂ ಕರ್ನಾಟಕ ಪ್ರಾಂತ ರೈತ ಸಂಘದ 7ನೇ ಅಧಿವೇಶನ ಬಲವಾಗಿ ಖಂಡಿಸುತ್ತದೆ. ಸರ್ಕಾರ ಇಂಥ ರೈತ ವಿರೋಧಿ, ಜನ ವಿರೋಧಿ ಕ್ರಮವನ್ನು ಬಿಟ್ಟುಕೊಡಬೇಕೆಂದು ಒತ್ತಾಯಿಸಲು ಏಪ್ರಿಲ್ 5 ರಂದು ರಾಜ್ಯದಾದ್ಯಂತ ಪ್ರತಿಭಟನಾ ದಿನಾಚರಣೆ ಆಚರಿಸಬೇಕೆಂದು ಕರೆ ಕೊಡುತ್ತದೆ."

ಏಪ್ರಿಲ್ 5 ರಂದು ರಾಜ್ಯದ ಎಲ್ಲ ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ಮೆರವಣಿಗೆ, ಮತ ಪ್ರದರ್ಶನ, ಬಹಿರಂಗ ಸಭೆಗಳನ್ನು ನಡೆಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಮನವಿ ಮಾಡಿದೆ.

ಮುಳಬಾಗಿಲಿನಲ್ಲಿ ನಡೆದ ಕರ್ನಾಟಕ ಪ್ರಾಂತ ರೈತ ಸಂಘದ ೭ನೇ ಸಮ್ಮೇಳನ

ಕರ್ನಾಟಕ ಪ್ರಾಂತ ರೈತ ಸಂಘದ 7ನೇ ಸಮ್ಮೇಳನ ಮಾರ್ಚ್ 11ರಿಂದ 14ರ ವರೆಗೆ ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ನಡೆಯಿತು. ತಾ|| 11 ರಂದು ಸಂಜೆ 5ಗಂಟೆಗೆ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಪ್ರ. ಕಾರ್ಯದರ್ಶಿ ಕಾಂ| ಇ. ಎಂ ಎಸ್. ನಂಬೂದಿರಿ ಪಾಡ್ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. (ಕಾಂ| ಇ. ಎಂ. ಸ್.ರ ಭಾಷಣದ ಸಾರಾಂಶವು 14-3-82ರ ಐಕ್ಯರಂಗದಲ್ಲಿ ಪ್ರಕಟವಾಗಿದೆ). ರಾಜ್ಯ ರೈತಸಂಘದ ಅಧ್ಯಕ್ಷರಾದ ಕಾಂ| ಎಚ್. ಮುಗುವಾಳಪ್ಪನವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

ತಾ. 12 ರಂದು ರೈತ ಸಂಘದ ರಾಜ್ಯ ಸಮಿತಿಯ ಪ್ರ. ಕಾರ್ಯದರ್ಶಿಯವರಾದ ಕಾಂ| ಪಿ. ರಾಮಚಂದ್ರ ರಾವ್ ರವರು ಸುದೀರ್ಘವಾದ ಲಿಖಿತ ವರದಿಯನ್ನು ಮಂಡಿಸುತ್ತಾ, ಕಳೆದ ಸಮ್ಮೇಳನದ ನಂತರ ನಮ್ಮ ರಾಜ್ಯದಲ್ಲಿ ನಡೆದ ರೈತರ ಹಲವಾರು ಹೋರಾಟಗಳ ವಿವರಣೆ ಕೊಟ್ಟರು.

ಹಳ್ಳಿಯ ಬಡಜನರ ಸಮಸ್ಯೆ, ರೈತ ಸಂಘದ ಪಾತ್ರ, ಮುಂದಿನ ದಿನಗಳಲ್ಲಿ ಸಂಘಟನೆ ಮತ್ತು ಹೋರಾಟಗಳನ್ನು ಬಲಪಡಿಸುವ ಬಗ್ಗೆ ಸೂಚನೆ–ಈ ಅಂಶಗಳು ವರದಿಯಲ್ಲಿ ಒಳಗೊಂಡಿದ್ದವು.

ಕೋಲಾರ, ಬೆಂಗಳೂರು, ಕೊಡಗು ದ.ಕ., ಶಿವಮೊಗ್ಗ, ತುಮಕೂರು, ಚಿತ್ರದುರ್ಗ, ಧಾರವಾಡ, ಬೆಳಗಾಂವ, ಬಿಜಾಪೂರ, ಗುಲ್ಬರ್ಗ, ಬೀದರ, ರಾಯಚೂರು, ಮೈಸೂರು ಮತ್ತು ಉತ್ತರ ಕನ್ನಡ (NK) ಜಿಲ್ಲೆಗಳನ್ನು ಪ್ರತಿನಿಧಿಸಿ 185 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಅಖಿಲ ಭಾರತ ಕಿಸಾನ್ ಸಭಾ (AIKS) ದ ಪ್ರಧಾನ ಕಾರ್ಯದರ್ಶಿ ಕಾಂ| ಚಾತುನ್ನಿಮಾಸ್ಟರ್ (ಎಂ. ಪಿ.) ಅವರು ಸಮ್ಮೇಳನದುದ್ದಕ್ಕೂ ಹಾಜರಿದ್ದು ಮಾರ್ಗದರ್ಶನ ನೀಡಿದರು.

ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ಪಿ. ರಾಮಚಂದ್ರ ರಾವ್ ಮಂಡಿಸಿದ ವರದಿಯ ಮೇಲೆ ಸುದೀರ್ಘ ಚರ್ಚೆ ನಡೆದು ವರದಿಯನ್ನು ಅಂಗೀಕರಿಸಲಾಯಿತು. (ಚರ್ಚೆಯಲ್ಲಿ 32 ಪ್ರತಿನಿಧಿಗಳು ಭಾಗವಹಿಸಿದ್ದರು).

ದಿನಾಂಕ 14 ರಂದು ಬೆಳಿಗ್ಗೆ ಪ್ರಾಂತ ರೈತ ಸಂಘಕ್ಕೆ ನೂತನ ಪದಾಧಿಕಾರಿಗಳನ್ನು ಚುನಾಯಿಸಲಾಯಿತು. ಒಂಬತ್ತು ಮಂದಿ ಪದಾಧಿಕಾರಿಗಳು ಸೇರಿ 35 ಮಂದಿಯ ರಾಜ್ಯ ಕಾರ್ಯಕಾರಿ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು. ಒಂಬತ್ತು ಪದಾಧಿಕಾರಿಗಳು ಮತ್ತು 22 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಮ್ಮೇಳನವು ಆಯ್ಕೆ ಮಾಡಿ, ಉಳಿದ ನಾಲ್ಕು ಸ್ಥಾನಗಳನ್ನು ಭರ್ತಿ ಮಾಡಿಕೊಳ್ಳಲು ರಾಜ್ಯ ಸಮಿತಿಗೆ ಅಧಿಕಾರವಿತ್ತಿತು.

ಪದಾಧಿಕಾರಿಗಳ ವಿವರ:

ಅಧ್ಯಕ್ಷ: ಕಾಂ| ಪಿ. ರಾಮಚಂದ್ರ ರಾವ್.

ಉಪಾಧ್ಯಕ್ಷರುಗಳು; ಕಾಂ| ಎಚ್. ಮುಗುವಾಳಪ್ಪ, ಕಾಂ| ಭೀಮಸಿಕಲಾದಗಿ, ಕಾಂ| ಎಸ್. ಲಕ್ಷ್ಮಯ್ಯ.

ಪ್ರಧಾನ ಕಾರ್ಯದರ್ಶಿ: ಕಾಂ| ವಿ. ಎಜ್ ಹಳಕಟ್ಟಿ.

ಕಾರ್ಯದರ್ಶಿಗಳು: ಕಾಂ| ಪಿ. ಜಗನ್ನಾಥ್, ಕಾಂ| ಯು. ಜನಾರ್ಧನ ನಾಯಕ್, ಕಾಂ| ಚಂದ್ರಶೇಖರ. ಎಸ್. ಬಾಳಿ.

ಖಜಾಂಚಿ: ಕಾಂ| ಕಲ್ಲಪ್ಪ ಕಿರಣಗಿ.

ಈ ಮೇಲ್ಕಂಡ ಪದಾಧಿಕಾರಿಗಳನ್ನಲ್ಲದೇ 22 ಜನರ ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾಯಿಸಲಾಯಿತು. (ಹೆಸರುಗಳ ವಿವರ ಮುಂದಿನ ವಾರ) ಹಾಗೂ ಕಲ್ಕತ್ತಾದಲ್ಲಿ ನಡೆಯಲಿರುವ ಅಖಿಲ ಭಾರತ ಕಿಸಾನ್ ಸಭಾ ಅಧಿವೇಶನಕ್ಕೆ 15 ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು. (ಹೆಸರುಗಳ ವಿವರ ಮುಂದಿನ ವಾರ)

ರೈತರ ಬೇಡಿಕೆಗಳ ಕುರಿತು, ಬೆಂಬಲಿತ ಬೆಲೆ ಮತ್ತು ಕನಿಷ್ಠ ಕೂಲಿ ಜಾರಿಯ ಕುರಿತು ಈ ಮುಂತಾದ ವಿಷಯಗಳನ್ನೊಳಗೊಂಡ ಅನೇಕ ಠರಾವುಗಳನ್ನು ಸಮ್ಮೇಳನ ಅಂಗೀಕರಿಸಿತು (ವಿವರ ಮುಂದಿನ ವಾರ)

ಬೃಹತ್ ಬಹಿರಂಗ ಸಭೆ

ಮಾ. 14ರ ಸಂಜೆ ಸಮ್ಮೇಳನದ ಅಂಗವಾಗಿ ಭಾರೀ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆದವು. ಬಹಿರಂಗ ಸಭೆಗೆ ನಾನಾ ಕಡೆಗಳಿಂದ ರೈತ ಕಾರ್ಮಿಕರು ಆಗಮಿಸಿದ್ದರು. ಈ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ| ಇ.ಕೆ.ನಾಯನಾರ್, ಶಂಕರಯ್ಯ ಮತ್ತು ಕಾಂ| ಚಾತುನ್ನಿ ಮಾಸ್ಟರ್ ಮಾತನಾಡಿದರು.

ವಿಶಾಲ ತಳಹದಿಯ ರೈತ ಹೋರಾಟ ನಡೆಯಲಿ

—ಇ. ಕೆ. ನಾಯನಾರ್.

"ನಾವು ಕೇರಳದ ರೈತರ ೧ ಕೋಟಿ ಬಡ್ಡಿಯ ಭಾರವನ್ನು ರದ್ದು ಮಾಡಿದ್ದೆವು. ಪಂಪ್‌ಸೆಟ್, ನೀರು ಪೂರೈಕೆಗಳಿಗೆಲ್ಲ ನೂರಕ್ಕೆ ನೂರರಷ್ಟು ಸಬ್

(೮ನೇ ಪುಟವನ್ನು ನೋಡಿ)

ಸಂಕ್ಷಿಪ್ತ ಸಮಾಚಾರಗಳು

ಕಾಸರಗೋಡು

7-3-82 ರಂದು ಕೇರಳ ಎನ್.ಜಿ.ಓ. ಯೂನಿಯನ್‌ನ ಕಾಸರಗೋಡ ಬ್ರ್ಯಾಂಚ್‌ನ 19ನೇ ವಾರ್ಷಿಕ ಸಮ್ಮೇಳನ ನಡೆಯಿತು. ಆರಂಭದಲ್ಲಿ ಕಾಸರಗೋಡ ಬ್ರ್ಯಾಂಚ್‌ನ ಅಧ್ಯಕ್ಷ ಕಾಂ| ಎಂ. ಕೃಷ್ಣೋಜಿಯವರು ಧ್ವಜಾರೋಹಣ ಮಾಡಿದರು. ಸಿ.ಐ.ಟಿ.ಯು. ಪ್ರಾಂತ ಸಮಿತಿಯ ಜೊತೆ ಕಾರ್ಯದರ್ಶಿ ಕಾಂ| ಓ. ಭರತನ್ ಅವರು ಸಮ್ಮೇಳನವನ್ನು ಉದ್ಘಾಟಿಸಿದರು.

ಕಾರ್ಯದರ್ಶಿ ಕಾಂ| ಎಂ. ವಿ. ಹರಿದಾಸ್ ಮಂಡಿಸಿದ ವಾರ್ಷಿಕ ವರದಿಯನ್ನು, ಕೋಶಾಧಿಕಾರಿ ಕಾಂ| ಗೋಪಿನಾಥನ್ ನಾಯರ್ ಮಂಡಿಸಿದ ಆಯವ್ಯಯ ವರದಿಯನ್ನು ಮಂಜೂರು ಮಾಡಲಾಯಿತು. ಸಮ್ಮೇಳನವನ್ನುದ್ದೇಶಿಸಿ ಕಾಂ| ಪಿ. ಕುಂಞಕಣ್ಣನ್, ಎ. ಕುಂಞರಾಮನ್ ನಾಯರ್ ಮಾತನಾಡಿದರು.

ಸಮ್ಮೇಳನದಲ್ಲಿ ತುಟ್ಟಿಭತ್ತೆ ಕಂತುಗಳನ್ನು ನೀಡುವ ಬಗ್ಗೆ, ಟ್ರ್ಯಾವಲಿಂಗ್ ಅಲೌನ್ಸ್ ಹೆಚ್ಚಿಸುವ ಬಗ್ಗೆ ಮತ್ತಿತರ ವಿಷಯಗಳ ಕುರಿತು ಠರಾವುಗಳನ್ನು ಅಂಗೀಕರಿಸಲಾಯಿತು.

ಕೊನೆಯಲ್ಲಿ ಹೊಸ ವರ್ಷದ ಪದಾಧಿಕಾರಿಗಳನ್ನು ಚುನಾಯಿಸಲಾಯಿತು. ಅಧ್ಯಕ್ಷರಾಗಿ ಎಂ. ಕೃಷ್ಣೋಜಿ, ಉಪಾಧ್ಯಕ್ಷರುಗಳಾಗಿ ಕೆ. ಸುಬ್ರಾಯಗಟ್ಟಿ, ಪಿ. ರಾಮಕೃಷ್ಣನ್, ಕಾರ್ಯದರ್ಶಿಯಾಗಿ ಎಂ. ವಿ. ಹರಿದಾಸ್, ಜೊತೆ ಕಾರ್ಯದರ್ಶಿಗಳಾಗಿ ಎನ್. ಬಾಲಕೃಷ್ಣನ್ ಮತ್ತು ಸಿ. ಅರವಿಂದಾಕ್ಷನ್, ಕೋಶಾಧಿಕಾರಿಯಾಗಿ, ಎಂ. ಗೋಪಿನಾಥನ್ ಅವರನ್ನು ಚುನಾಯಿಸಲಾಯಿತು.

ಸಮ್ಮೇಳನದ ಅಂಗವಾಗಿ ಸಂಜೆ ಕಾಸರಗೋಡ ಬಸ್‌ಸ್ಟ್ಯಾಂಡ್ ಬಳಿ ಬಹಿರಂಗ ಸಭೆ ನಡೆಸಲಾಯಿತು.

ಚಿಂತಾಮಣಿ

12-13-82 ರಂದು ಡಿವೈಎಫ್‌ಐ. ಕೋಲಾರ ಜಿಲ್ಲಾ ಸಮಿತಿಯ ಸಭೆ ಸೇರಿತ್ತು. ಮಾರ್ಚ್ 28ರಂದು ನಿರುದ್ಯೋಗ ವಿರೋಧಿ ದಿನಾಚರಣೆಯನ್ನು ಡಿವೈಎಫ್‌ಐ. ರಾಜ್ಯದಾದ್ಯಂತ ಆಚರಿಸಲಿದೆ. ಈ ವೇಳೆಗೆ ರಾಜ್ಯದ ನಾನಾ ಕಡೆಗಳಿಂದ ಸೈಕಲ್ ಜಾಥಾ ಬೆಂಗಳೂರಿಗೆ ಬರಲಿವೆ. ಈ ಕಾರ್ಯಕ್ರಮದ ಪೂರ್ವಭಾವಿಯಾಗಿ ಕೋಲಾರ ಜಿಲ್ಲೆಯಿಂದ ಸೈಕಲ್ ಜಾಥಾ ಕೊಂಡೊಯ್ಯುವ ಕುರಿತಾಗಿ ಸಭೆಯಲ್ಲಿ ಚರ್ಚಿಸಲಾಯಿತು.

ಕೆ.ಜಿ.ಎಫ್, ಚಿಂತಾಮಣಿ, ಬಂಗಾರಪೇಟೆ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಮುಂತಾದ ಕೇಂದ್ರಗಳಿಂದ ಸುಮಾರು 500 ಜನರ ಸೈಕಲ್ ಜಾಥಾ ಏರ್ಪಡಿಸುವ ತೀರ್ಮಾನ ಕೈಗೊಳ್ಳಲಾಯಿತು.

ಈ ಕಾರ್ಯಕ್ರಮದ ಖರ್ಚು ವೆಚ್ಚಕ್ಕಾಗಿ ಅಚ್ಚು ಹಾಕಿರುವ ಬ್ಯಾಡ್ಜ್‌ಗಳ ಮಾರಾಟವನ್ನು ತೀವ್ರಗೊಳಿಸಬೇಕೆಂದೂ ಸಭೆಯಲ್ಲಿ ತೀರ್ಮಾನಿಸಲಾಯಿತು.

ಸವದತ್ತಿ

7-3-82ರಂದು ಸವದತ್ತಿಯಲ್ಲಿ ಪ್ರಾಂತ ರೈತ-ಸಂಘದ ಬೆಳಗಾಂವ ಜಿಲ್ಲಾ ಘಟಕದ ಆಶ್ರಯದಲ್ಲಿ ಜಿಲ್ಲಾ ರೈತ ಸಮ್ಮೇಳನ ನಡೆಯಿತು. ಸಮ್ಮೇಳನದಲ್ಲಿ ಸುಮಾರು 100 ಪ್ರತಿನಿಧಿಗಳು ಭಾಗವಹಿಸಿದ್ದರು.

ಮಲಪ್ರಭಾ, ಹಾಗೂ ನಿಪ್ಪಾಣಿ ರೈತ ಹೋರಾಟಗಳ ನಂತರದ ಪರಿಸ್ಥಿತಿಯನ್ನು ಚರ್ಚಿಸಲಾಯಿತು. ಸುಮಾರು ಹತ್ತು ಪ್ರಮುಖ ಠರಾವುಗಳನ್ನು ಅಂಗೀಕರಿಸಿ, ಈ ಠರಾವುಗಳನ್ನು ಸರಕಾರದ ಮುಂದಿಡಲು ಹಾಗೂ ಸಂಬಂಧಪಟ್ಟ ಸರಕಾರಿ ಅಧಿಕಾರಿಗಳ ಜೊತೆ ಚರ್ಚಿಸಲು 5 ಜನ ಸದಸ್ಯರ ಒಂದು ಉಪಸಮಿತಿಯನ್ನು ಆಯ್ಕೆ ಮಾಡಲಾಯಿತು.

ರೆವಿನ್ಯೂ ಅಧಿಕಾರಿಗಳ ಬಗ್ಗೆ, ನೀರಾವರಿ ಅಧಿಕಾರಿಗಳ ಮತ್ತು ಸಹಕಾರಿ ಅಧಿಕಾರಿಗಳ ಬಗ್ಗೆ ರೈತರಿಂದ ಬಂದ ದೂರುಗಳನ್ನು ಸಮ್ಮೇಳನ ಪರಿಶೀಲಿಸಿ ಅವುಗಳ ಕುರಿತು ಮುಂದಿನ ಕ್ರಮಕೈಗೊಳ್ಳುವ ನಿರ್ಣಯ ಅಂಗೀಕರಿಸಲಾಯಿತು.

ಸಮ್ಮೇಳನದಲ್ಲಿ ಪ್ರತಿನಿಧಿಗಳನ್ನುದ್ದೇಶಿಸಿ ಎಸ್. ಎಚ್. ಕಪ್ಪಂಣವರ, ಗಂಗಪ್ಪ ಎತ್ತಿನಗುಡ್ಡ, ಟಿ. ಎಚ್. ವಂಗಣ್ಣವರ, ಜೀನ ಲೋಕೂರ, ಕಲ್ಲಪ್ಪ ಶಿರಕೊಳ, ಎಚ್. ಎ. ಹಳಕಟ್ಟಿ, ವೈ. ಆರ್. ಪೂಜಾರ್ ಮೊದಲಾದವರು ಮಾತನಾಡಿದರು. ಅಧ್ಯಕ್ಷತೆಯನ್ನು ಸ್ವಾಮಿ ನಿತ್ಯಾನಂದಜೀ ವಹಿಸಿದ್ದರು.

ಕೊಟೆಕಾರು

3-3-82 ರಂದು ದ. ಕ. ಜಿಲ್ಲೆಯ ಕೋಟೆಕಾರು ಸರ್ಕಲ್ ರೈತ ಸಂಘದ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಕಾಂ| ಯು. ಪಿ. ಡಿಸೋಜ ವಹಿಸಿದ್ದರು. ಆರಂಭದಲ್ಲಿ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಮನೆ ತೆರಿಗೆಯನ್ನು ಹೆಚ್ಚಿಸುವ ಸರಕಾರದ ಸೂಚನೆಯನ್ನು, ನಗರಾಸ್ತಿ ಮಿತಿ ಕಾಯಿದೆಯಿಂದ ಕೃಷಿ ಭೂಮಿಯನ್ನು ಹೊರತುಪಡಿಸಬೇಕೆಂದು ಸರಕಾರವನ್ನು ಒತ್ತಾಯಿಸಲಾಯಿತು. ಹಳೇ ಗೇಣಿಯನ್ನು ವಸೂಲು ಮಾಡದಿರಲು, ಉಳ್ಳಾಲ ರೈಲ್ವೆ ಸೇತುವೆಯ ಸಾರ್ವಜನಿಕ ದಾರಿಯನ್ನು ಕೂಡಲೇ ತೆರೆಯಬೇಕೆಂಬ ಠರಾವುಗಳನ್ನು ಅಂಗೀಕರಿಸಲಾಯಿತು.

ಪೆರ್ಮನ್ನೂರು ಪಂಚಾಯತಿ ಸ್ಥಳವನ್ನು ಸಾರ್ವಜನಿಕ ಸಮಾರಂಭಗಳಿಗೆ ಕೊಡದಿರುವುದನ್ನು ಖಂಡಿಸಲಾಯಿತು.

ಬೀದರ

ಬೀದರ ಜಿಲ್ಲಾ ಡಿವೈಎಫ್‌ಐ ಜಿಲ್ಲಾ ಸಮ್ಮೇಳನದ ಪೂರ್ವಭಾವಿಯಾಗಿ ಮಾರ್ಚ್ 14 ಮತ್ತು 15 ರಂದು ತರಬೇತಿ ಶಿಬಿರವನ್ನು ಏರ್ಪಡಿಸಲಾಗಿತ್ತು.

ಮಾರ್ಚ್ 16ರಂದು ಡಿವೈಎಫ್‌ಐ ಜಿಲ್ಲಾ ಸಮ್ಮೇಳನ ನಡೆಯಿತು. ಆರಂಭದಲ್ಲಿ ವಿಶ್ವನಾಥ ಪಾಟೀಲರು ಧ್ವಜಾರೋಹಣ ಮಾಡಿದರು. ಕಾರ್ಯದರ್ಶಿ ಸಂಗಶಿಲ್ಪಿ ಪಾಟೀಲರು ಸಮ್ಮೇಳನದ ಚಟುವಟಿಕೆಗಳ ಕುರಿತಾದ ವರದಿಯನ್ನೊಪ್ಪಿಸಿದರು. ವರದಿಯ ಮೇಲೆ ಚರ್ಚೆ ನಡೆದು ವರದಿಯನ್ನು ಅಂಗೀಕರಿಸಲಾಯಿತು.

ಕೊನೆಯಲ್ಲಿ ಜಿಲ್ಲಾ ಸಮಿತಿಗೆ ಈ ಕೆಳಕಂಡ ಪದಾಧಿಕಾರಿಗಳನ್ನು ಆರಿಸಲಾಯಿತು. ಅಧ್ಯಕ್ಷರಾಗಿ ಪುಂಡಲೀಕ ಮಳೆಕುಂದ, ಕಾರ್ಯದರ್ಶಿಯಾಗಿ ಸಂಗಶೆಟ್ಟಿ ಪಾಟೀಲ, ಸಹಕಾರ್ಯದರ್ಶಿಯಾಗಿ ನರಸಿಂಗ ಬರಾದಾರ ಮತ್ತು ಉಪಾಧ್ಯಕ್ಷರಾಗಿ ಮಲ್ಲಶೆಟ್ಟಿ ಪಾಟೀಲರು ಆಯ್ಕೆಯಾಗಿದ್ದಾರೆ.

ಬೆಂಬಲಕ್ಕೆ ಮನವಿ

ಗ್ರಂಥಾಲಯಗಳು ಸರಿಯಾಗಿ ನಡೆಯಬೇಕಾದರೆ ಅಲ್ಲಿ ಪರಿಣಿತರ ಅವಶ್ಯಕತೆ ಇದೆ. ನಾಡಿನ ಹಲವಾರು ಗ್ರಂಥಾಲಯಗಳಲ್ಲಿ ಪರಿಣಿತರ ಹುದ್ದೆಗಳು ಖಾಲಿಬಿದ್ದು ಅಲ್ಲಿಯ ಕಾರ್ಯಗಳು ಸುರಳಿತವಾಗಿ ಸಾಗದೆ ಕುಂಠಿತಗೊಳ್ಳುತ್ತಿರುವುದು. ಒಂದೆಡೆಯಾದರೆ, ಪರಿಣಿತ ವಿದ್ಯೆಯನ್ನು ಪಡೆದೂ ನಿರುದ್ಯೋಗಿಗಳಾಗಿ ಅಲೆಯುತ್ತಿದ್ದಾರೆ.

ಹೈದರಾಬಾದ್, ಕರ್ನಾಟಕ ನಿರುದ್ಯೋಗಿ ಗ್ರಂಥಾಲಯ-ವಿಜ್ಞಾನ ಪದವೀಧರರು ಸಂಘಟನೆಯನ್ನು ಮಾಡಿಕೊಂಡಿದ್ದು, ಸರಕಾರಿ ಮತ್ತು ಖಾಸಗಿ ಮಹಾ ವಿದ್ಯಾಲಯಗಳಲ್ಲಿ ಖಾಲಿ ಇರುವ ಜಾಗಗಳಿಗೆ ಗ್ರಂಥಾಲಯ ಪದವೀಧರರನ್ನು ಬೇಗನೆ ತುಂಬಬೇಕೆಂದೂ ಅಥವಾ ನಿರುದ್ಯೋಗಿ ಭತ್ಯ ಕೊಡಬೇಕೆಂದು ಒತ್ತಾಯಿಸಿದ್ದಾರೆ.

ಸಂಘಟನೆಗೊಂಡು ತಮ್ಮ ಬೇಡಿಕೆಗಳಿಗೋಸ್ಕರ ಹೋರಾಡುತ್ತಿರುವ ಗ್ರಂಥಾಲಯ-ವಿಜ್ಞಾನ ಪದವೀಧರರನ್ನು ಬೆಂಬಲಿಸಬೇಕೆಂದು ಗುಲಬರ್ಗಾ ಘಟಕದ ಕಮಲಾಕರ ಯಾಲಕಪಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಶಾಸಕರ ಮನೆ ಎದುರು ಧರಣಿ

ದಿನನಿತ್ಯ ಎಂಬಂತೆ ನಡೆಯುತ್ತಿರುವ ದಲಿತರ ಕಗ್ಗೊಲೆಗಳನ್ನು ಹಾಗೂ ಈ ಕುರಿತು ಮೌನ ತಾಳಿರುವ ದಲಿತ ಪ್ರತಿನಿಧಿಗಳ, ದಲಿತ ಮಂತ್ರಿ ಶಾಸಕರ ಸ್ವಾರ್ಥ ಪರ ಬೇಜವಾಬ್ದಾರಿತನವನ್ನು ಪ್ರತಿಭಟಿಸಿ ರಾಜ್ಯದಾದ್ಯಂತ ದಲಿತ ಮಂತ್ರಿಗಳ, ಶಾಸಕರ ಮನೆಗಳ ಮುಂದೆ ದಲಿತ ಸಂಘರ್ಷ ಸಮಿತಿಯು 28-2-82 ರಂದು ಧರಣಿ ಸತ್ಯಾಗ್ರಹ ಏರ್ಪಡಿಸಿತ್ತು.

ಈ ಕಾರ್ಯಕ್ರಮದ ಅಂಗವಾಗಿ 28-2-82 ರಂದು ದ. ಕ. ಜಿಲ್ಲೆಯ ಸುಳ್ಯ ಮೀಸಲು ಕ್ಷೇತ್ರದ ಶಾಸಕ ಶ್ರೀ ಎಂ. ರಾಮಚಂದ್ರ ಅವರ ನಿವಾಸದೆದುರು ದ.ಕ. ಜಿಲ್ಲಾ ದ. ಸಂ. ಸ.ಯ ಆಶ್ರಯದಲ್ಲಿ ದರಣಿ ಸತ್ಯಾಗ್ರಹ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದಲಿತರು ಭಾಗವಹಿಸಿದ್ದರು.

ಶುಭ - ವಿವಾಹ

11-3-82 ರಂದು ಬೆಂಗಳೂರಿನಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿಯ ಸದಸ್ಯ ಕಾಂ| ಟಿ. ಎಸ್. ಅನಂತರಾವ್ ಅವರ ವಿವಾಹವು ಸರೋಜಾ ಅವರೊಂದಿಗೆ ನಡೆಯಿತು.

ಈ ಸರಳ ಸಮಾರಂಭದಲ್ಲಿ ನೂರಾರು ಸಂಖ್ಯೆಯಲ್ಲಿ ಪಕ್ಷದ ಸದಸ್ಯರು, ಹಿತೈಷಿಗಳು ಮತ್ತು ಕಾರ್ಮಿಕ ಬಾಂಧವರು ಪಾಲ್ಗೊಂಡಿದ್ದರು.

ಪಕ್ಷದ ರಾಜ್ಯ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳಲು ಬೆಂಗಳೂರಿಗೆ ಆಗಮಿಸಿದ್ದ ಕಾಂ| ಇ.ಎಂ.ಎಸ್ ನಂಬೂದರಿಪಾಡ್‌ರು, ರಾಜ್ಯಸಮಿತಿ ಕಾರ್ಯದರ್ಶಿ ಕಾ| ಎಂ.ಕೆ. ಭಟ್, ಸಿಐಟಿಯು ರಾಜ್ಯ ಸಮಿತಿಯ ಅಧ್ಯಕ್ಷ ಕಾಂ| ಸೂರ್ಯನಾರಾಯಣ ರಾವ್ ಮೊದಲಾದವರು ವಧೂವರರಿಗೆ ಶುಭಕೋರಿ ಮಾತನಾಡಿದರು.

ಈ ವಿವಾಹದ ನೇತೃತ್ವವನ್ನು ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ| ಪಿ. ಕೆ. ಸುಬ್ರಮಣಿಯವರು ವಹಿಸಿದ್ದರು.

ಬಿಜಾಪುರದಲ್ಲಿ

ಜಿಲ್ಲಾ ಸಮಿತಿ ಸಭೆ

5-3-82 ರಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಜಿಲ್ಲಾ ಸಮಿತಿಯ ಸಭೆಯು ನಡೆದು ಈ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಿತು.

ಸಕಾರಣವಿಲ್ಲದೇ ಬಸ್ ಪ್ರಯಾಣದ ದರ ಹೆಚ್ಚಿಸಲಿರುವುದನ್ನು ಸಮಿತಿ ಖಂಡಿಸಿ ರಸ್ತೆ ಸಾರಿಗೆ ಸಂಸ್ಥೆಯ ಜನವಿರೋಧಿ ಕ್ರಮದ ವಿರುದ್ಧ ಹೋರಾಡಲು ಮುಂದೆ ಬರುವಂತೆ ವಿರೋಧ ಪಕ್ಷಗಳಿಗೆ ಜಿಲ್ಲಾ ಸಮಿತಿ ಕರೆ ನೀಡಿದೆ.

ನಗರಸಭೆ ಅಧಿಕಾರಿಗಳು ಮನೆ ತೆರಿಗೆಯನ್ನು ಕೂಡಲೇ ಸಂದಾಯ ಮಾಡದಿದ್ದರೆ ಕ್ರಮ ಕೈಗೊಳ್ಳುವ ಬೆದರಿಕೆ ಹಾಕಿರುವುದನ್ನು ಸಮಿತಿ ಖಂಡಿಸಿದೆ. ನಾಗರಿಕರಿಗೆ ಪ್ರಾಥಮಿಕ ಸೌಲಭ್ಯ ಒದಗಿಸಲು ಅಸಮರ್ಥರಾಗಿರುವ ನಗರಸಭೆ ಆಡಳಿತದ ವಿರುದ್ಧ ಹೋರಾಡಲು ಮುಂದೆ ಬರಬೇಕೆಂದು ನಾಗರೀಕರಿಗೆ ಕರೆ ನೀಡಿದೆ.

ಭೂನ್ಯಾಯ ಮಂಡಲಿಗಳನ್ನು ಪುನರ್ರಚಿಸಿದ್ದೇವೆಂದು ಸರಕಾರ ಹೇಳುತ್ತಿದ್ದರೂ, ಭೂಮಾಲಿಕ ಪರ, ಭ್ರಷ್ಟಾಚಾರಿ ಹಳೇ ಸದಸ್ಯರನ್ನೇ ಮತ್ತೆ ಪುನರ್ರಚಿತ ಭೂನ್ಯಾಯ ಮಂಡಳಿಗಳಲ್ಲಿ ಸೇರಿಸಿರುವುದನ್ನು ಪಕ್ಷದ ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿದೆ.

ಭೂ ಅಭಿವೃದ್ಧಿ ಬ್ಯಾಂಕಿನವರು ರೈತರ ಬಾಕಿ ಸಾಲದ ಕಂತನ್ನು ಒತ್ತಾಯದಿಂದ ಜಪ್ತಿ ಮಾಡಿ, ವಸೂಲಿ ಮಾಡುತ್ತಿರುವುದನ್ನು ಖಂಡಿಸಿ, ಕಳೆದ ವರ್ಷ ಬರಗಾಲವಿದ್ದ ಮೂಲಕ ರೈತರ ಪರಿಸ್ಥಿತಿ ಕೆಟ್ಟಿದ್ದ ಕಾರಣ ಸಾಲದ ಹಣವನ್ನು ವಸೂಲಿ ಮಾಡುವಾಗ ಜಪ್ತಿ ಮತ್ತಿತರ ಒತ್ತಾಯದ ಕ್ರಮಗಳನ್ನು ಅನುಸರಿಸಬಾರದೆಂದು, ಒತ್ತಾಯ ಮಾಡಿದ್ದೇ ಆದಲ್ಲಿ ತೀವ್ರ ಹೋರಾಟ ಕೈಗೊಳ್ಳಬೇಕಾದೀತೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಬೆಂಗಳೂರಿನಲ್ಲಿ

ಭಾರತೀ ಶತಮಾನೋತ್ಸವ

21-3-82 ರಂದು ಸಾಯಂಕಾಲ 5 ಘಂಟೆಗೆ ಬೆಂಗಳೂರಿನ ಸೆನೇಟ್ ಹಾಲ್‌ನಲ್ಲಿ ಮಹಾಕವಿ ಸುಬ್ರಮಣ್ಯ ಭಾರತಿಯವರ ಶತಮಾನೋತ್ಸವದ ಉದ್ಘಾಟನಾ ಸಮಾರಂಭ ನಡೆಯಲಿದೆ.

ಮಹಾಕವಿ ಭಾರತಿಯ ಹಾಡುಗಳ ಕನ್ನಡ ಅನುವಾದದ ಪುಸ್ತಕವನ್ನು ಶ್ರೀ ವಿ. ಎಸ್. ಕೃಷ್ಣಯ್ಯರ್ ಬಿಡುಗಡೆ ಮಾಡಲಿದ್ದಾರೆ. ಈ ಕಾರ್ಯಕ್ರಮದ ಅಂಗವಾಗಿ ಸಭೆಯನ್ನುದ್ದೇಶಿಸಿ ಡಾ|| ಆರ್. ವೈದ್ಯನಾಥನ್, ಸಿದ್ಧಲಿಂಗಯ್ಯ, ಕೆ. ವೆಂ. ರಾಜಗೋಪಾಲ್, ಸಿ. ವೀರಣ್ಣ, ಪಿ. ಕೆ. ಸುಬ್ರಮಣಿ, ಎ.ವಿ. ನಾಗೇಶ್ ಅವರುಗಳು ಮಾತನಾಡಲಿದ್ದಾರೆ.

ಸರ್ವರೂ ಆಗಮಿಸಬೇಕಾಗಿ ಸಂಘಟಕರು ಕೋರಿದ್ದಾರೆ.

ಮಾರ್ಕ್ಸ್‌ರವರ 99 ನೇ ವರ್ಧಂತಿ.

ಮಾರ್ಕ್ಸ್‌ರವರ ಸಮಾಧಿಯ ಬಳಿ ಎಂಗೆಲ್ಸ್ ನೀಡಿದ ಭಾಷಣ

ಮಾರ್ಕ್ಸ್‌ರವರ ಹೆಸರು ಮತ್ತು ಕೃತಿ ಚಿರಕಾಲ ಬಾಳುತ್ತದೆ !

ಅನು : ರುದ್ರಪ್ಪ ಕಾಯಿ

ಮಾರ್ಚ್ ತಿಂಗಳ ೧೪ ರಂದು ಮಧ್ಯಾಹ್ನದ ಮೂರಕ್ಕೆ ಇನ್ನೂ ಕಾಲು ಘಂಟೆ ಸಮಯವಿರುವಾಗ ಜಗತ್ತಿನ ಜೀವಿತ ಮಹಾ ಮೇಧಾವಿ ವಿಚಾರ ಕಾರ್ಯದಿಂದ ವಿಮುಕ್ತಿ ಪಡೆದ. ಕೇವಲ ಎರಡೇ ಎರಡು ನಿಮಿಷ ಆತ ಒಂಟಿಯಾಗಿದ್ದ. ಮತ್ತೆ ನಾವು ತಿರುಗಿ ಬಂದಾಗ ಆತ ತನ್ನ ಆರಾಮ ಖುರ್ಚಿಯಲ್ಲಿ ಪ್ರಶಾಂತವಾಗಿ ನಿದ್ರೆ ಹೋಗಿದ್ದ. ಆದರೆ ಅದು ಚಿರನಿದ್ರೆಯಾಗಿತ್ತು.

ಈ ವ್ಯಕ್ತಿಯ ಸಾವಿನಿಂದಾಗಿ ಯೂರೋಪ ಮತ್ತು ಅಮೇರಿಕದ ಸಮರಧೀರ ಕಾರ್ಮಿಕ ವರ್ಗಕ್ಕೂ, ಇತಿಹಾಸ ಶಾಸ್ತ್ರಕ್ಕೂ ಅಳೆಯಲಾರದ ಹಾನಿಯಾಗಿದೆ. ಈ ಮಹಾ ಚೇತನದ ನಿರ್ಗಮನದಿಂದುಂಟಾದ ಕೊರತೆಯು ಬೇಗನೇ ಅನುಭವಕ್ಕೆ ಬರಲಿದೆ. ಡಾರ್ವಿನ್‌ನು ಜೀವಲೋಕದ ಅಭಿವೃದ್ಧಿ ನಿಯಮವನ್ನು ಕಂಡುಹಿಡಿದ: ರಾಜಕೀಯ, ವಿಜ್ಞಾನ, ಕಲೆ, ಧರ್ಮ ಮುಂತಾದವುಗಳನ್ನರಸುವುದಕ್ಕೆ ಮುಂಚೆ ಮನುಕುಲವು ಉಂಡುಟ್ಟು ಬದುಕಬೇಕು. ಜೀವಿಸಲು ತುರ್ತು ಅಗತ್ಯವಾದ ಭೌತಿಕ ಸಾಧನದ ಉತ್ಪಾದನೆಯ ಪರಿಣಾಮವಾಗಿ ಒಂದು ನಿರ್ಧಿಷ್ಟ ಜನತೆಯ ಅಥವಾ ಒಂದು ಕಾಲಘಟ್ಟದ ಅಧಿಕ ಅಭಿವೃದ್ಧಿ ಮಟ್ಟವನ್ನಾಧರಿಸಿ ಆಯಾ ಜನತೆಯ ರಾಜ್ಯ ಸಂಸ್ಥೆಗಳು, ಕಾನೂನು ಪರಿಕಲ್ಪನೆಗಳು, ಕಲೆ, ಅಷ್ಟೇಕೆ ಧಾರ್ಮಿಕ ವಿಚಾರಗಳೂ ಕೂಡ ವಿಕಾಸಗೊಂಡಿರುತ್ತವಾದ್ದರಿಂದ ಈ ವರೆಗಿನ ರೀತಿಯಂತೆ ಅವನ್ನು ತಿರುವು-ಮುರುವು ಮಾಡಿ ವಿಶ್ಲೇಷಿಸುವುದಕ್ಕೆ ಬದಲಾಗಿ ಈ ದೃಷ್ಟಿಯಿಂದ ವಿಶ್ಲೇಷಿಸಬೇಕೆಂಬ ಸರಳ ಸಂಗತಿಯು ಮಿಥ್ಯ ವಿಚಾರದ ವಿಪರೀತ ಬೆಳವಣಿಗೆಯಲ್ಲಿ ಮುಚ್ಚಿಹೋಗಿತ್ತು.

ಇದಿಷ್ಟೇ ಅಲ್ಲ, ಇಂದಿನ ಕಾಲದ ಬಂಡವಾಳಶಾಹೀ ಉತ್ಪಾದನಾ ಪದ್ಧತಿಯ ಚಲನೆಯನ್ನೂ ಮತ್ತು ಈ ಉತ್ಪಾದನಾ ಪದ್ಧತಿ ಹುಟ್ಟಿಸಿರುವ ಬೂರ್ಜ್ವಾ ಸಮಾಜವನ್ನೂ ಮಾರ್ಕ್ಸ್ ಕಂಡು ಹಿಡಿದ. ಬಂಡವಾಳಶಾಹೀ ಅರ್ಥಶಾಸ್ತ್ರಜ್ಞರೂ, ಸಮಾಜವಾದಿ ಟೀಕಾಕಾರರೂ ಪರಿಹರಿಸಲು ತಡಕಾಡುತ್ತಿದ್ದ ಸಮಸ್ಯೆಯ ಮೇಲೆ ಮಿಗಿಲಾದ ಮೌಲ್ಯದ ಶೋಧನೆಯು ನೇರವಾದ ಬೆಳಕು ಚೆಲ್ಲಿತು.

ಇಂಥ ಎರಡು ಶೋಧನೆಗಳೇ ಒಂದು ಜೀವಿತ ಸಮಯಕ್ಕೆ ಸಾಕಷ್ಟಾಯಿತು. ಅಂಥ ಒಂದೇ ಒಂದು ಸಂಶೋಧನೆ ಮಾಡಲು ಸಮರ್ಥನಾದವನೂ ಸಂತುಷ್ಟನೇ. ಪ್ರತಿಯೊಂದು ವಿಷಯದಲ್ಲಿ ಮಾರ್ಕ್ಸ್ ಗೈದ ಶೋಧನೆಯು ಗೊಳ್ಳು ಶೋಧನೆಯಲ್ಲ. ಆತ ಬಹಳ ವಿಷಯದಲ್ಲಿ ಶೋಧನೆ ಗೈದ. ಆತ ಶೋಧನೆಗೈದ ಪ್ರತಿ ವಿಷಯದಲ್ಲೂ-ಏಕೆ, ಗಣಿತ ಶಾಸ್ತ್ರದಲ್ಲೂ ಆತ ಸ್ವತಂತ್ರ ಶೋಧನೆಗಳನ್ನು ಮಾಡಿದ.

ವಿಜ್ಞಾನದ ಇಂಥ ಮನುಷ್ಯನಾಗಿದ್ದ ಮಾರ್ಕ್ಸ್. ಆದರಿದು ಆತನ ವ್ಯಕ್ತಿತ್ವದ ಅರ್ಧ ಕೂಡ ಅಲ್ಲ. ವಿಜ್ಞಾನವು ಮಾರ್ಕ್ಸ್‌ನಿಗೆ ಐತಿಹಾಸಿಕ ಸ್ಫೋಟಕ ಕ್ರಾಂತಿಕಾರಿ ರಸ್ತೆಯಾಗಿತ್ತು. ದೈನಂದಿಕ ಉಪಯೋಗದ ಕಾರ್ಯತತ್ಪರತೆಯನ್ನೂ ಕಲ್ಪಿಸಲೂ ಸಾಧ್ಯವಿರದಂಥ ಸೈದ್ಧಾಂತಿಕ ವಿಜ್ಞಾನದಲ್ಲಿನ ಶೋಧನೆಗಳನ್ನೂ ಕೂಡ ಆತ ಅತೀ ಹರ್ಷದಿಂದ ಸ್ವಾಗತಿಸುತ್ತಿದ್ದ. ಆದರೆ ಅಂಥ ಒಂದು ಶೋಧನೆಯು ಕೈಗಾರಿಕೆಯಲ್ಲಿ ತಕ್ಷಣ ಕ್ರಾಂತಿಕಾರಿ ಬದಲಾವಣೆಯನ್ನು ತರುವ ಸಾಧ್ಯತೆಯನ್ನು ಹೊಂದಿದ್ದರೆ ಅಥವಾ ಸಾಮಾನ್ಯವಾಗಿ ಐತಿಹಾಸಿಕ ಬೆಳವಣಿಗೆಯಲ್ಲಿ ಅಂಥ ಬದಲಾವಣೆಯನ್ನೂ ತರಬಲ್ಲ ಸಾಧ್ಯತೆಯನ್ನು ಹೊಂದಿದ್ದರೆ ಆಗಿನ ಅವನ ಸಂತೋಷವೇ ಬೇರೆಯಾಗಿರುತ್ತಿತ್ತು. ಇತ್ತೀಚೆಗೆ ಮಾರ್ಕೆಲ್ ಡೆಫ್ರೆಝು ನಡೆಸಿದ ಶೋಧನೆಗಳೂ ಸೇರಿದಂತೆ ವಿದ್ಯುತ್ತಿಗೆ ಸಂಬಂಧಿಸಿದ ಶೋಧನೆಗಳನ್ನು ಮಾರ್ಕ್ಸ್ ಬಹಳಷ್ಟು ಆತುರದಿಂದ ಗಮನಿಸುತ್ತಿದ್ದ.

(ಡೆಫ್ರೆಝು: 1843–1918, ಫ್ರೆಂಚ್ ಭೌತಶಾಸ್ತ್ರಜ್ಞ)

ಇದೆಲ್ಲಕ್ಕಿಂತ ಮುಖ್ಯವಾಗಿ ಮಾರ್ಕ್ಸ್ ಒಬ್ಬ ಕ್ರಾಂತಿಕಾರಿಯಾಗಿದ್ದ. ಈ ಬಂಡವಾಳಶಾಹೀ ಸಮಾಜವನ್ನೂ, ಮತ್ತದು ಹುಟ್ಟಿಸಿದ ರಾಜ್ಯ ವ್ಯವಸ್ಥೆಯನ್ನು ಕಿತ್ತೊಗೆಯಲು ಒಂದಿಲ್ಲೊಂದು ರೀತಿಯಲ್ಲಿ ಸಹಾಯ ಮಾಡುವುದು; ಯಾವ ಆಧುನಿಕ ಕಾರ್ಮಿಕವರ್ಗದ ಸ್ಥಾನ, ಅವಶ್ಯಕತೆಗಳು ಮತ್ತು ವಿಮೋಚನೆಗೆ ತಕ್ಕುದಾದ ಪರಿಸ್ಥಿತಿಯ ಪ್ರಜ್ಞೆಯನ್ನು ಹುಟ್ಟಿಸಲು ಸ್ವತಃ ತಾನೇ ಪ್ರಥಮನಾಗಿದ್ದನೋ, ಆ ಕಾರ್ಮಿಕ ವರ್ಗದ ವಿಮೋಚನೆಗೆ ಕೊಡುಗೆ ನೀಡುವುದು ಆತನ ಜೀವಿತದ ಧ್ಯೇಯವಾಗಿತ್ತು. ಹೋರಾಟ ಆತನ ಒಂದು ಅಂಗವೇ ಆಗಿತ್ತು. ಆವೇಶ ಭರಿತನಾಗಿ, ಎಡೆಬಿಡದೆ ಕೇವಲ ಕೆಲವೇ ಜನ ಸಾಟಿಯಾಗಬಲ್ಲಂಥ ಗೆಲುವಿನಿಂದ ಆತ ಹೋರಾಡಿದ. ರೀನಿಶ್ ಝೀತಂಗ್‌ನಲ್ಲಿ (1842), ಪ್ಯಾರಿಸ್‌ನ ವೊರವಾಸ್ಟನಲ್ಲಿ (1844), ಡೂಶೆ-ಬ್ರಸೆಲರ್-ಝೀತಂಗ್‌ನಲ್ಲಿ (1847), ದಿ ನ್ಯೂಯಾರ್ಕ್ ಟ್ರಿಬ್ಯೂನ್‌ನಲ್ಲಿ (1852-61) ಆತ ಮಾಡಿದ ಕೆಲಸ, ಆತ ಬರೆದ ಅಸಂಖ್ಯ ಸಮರಧೀರ ಪುಸ್ತಕಗಳು, ಪ್ಯಾರಿಸ್, ಬ್ರಸೆಲ್ಸ್ ಮತ್ತು ಲಂಡನ್‌ನಲ್ಲಿ ಆತ ಮಾಡಿದ ಸಂಘಟನಾ ಕೆಲಸ-ಕೊನೆಯಲ್ಲಿ ಇವುಗಳಿಗೆಲ್ಲ ಕಳಸವಿಟ್ಟಂತೆ ಅಂತರಾಷ್ಟ್ರೀಯ ದುಡಿಮೆಗಾರರ ಸಂಘದ ರಚನೆ. ಬೇರಿನ್ನೇನು ಮಾಡದಿದ್ದರೂ ಸರಿ ಅದರ ಸಂಸ್ಥಾಪಕ ಸಂತುಷ್ಟನಾಗಬಹುದಾದಂಥ ಮಹತ್ಸಾಧನೆ ಅದು.

ಇದೆಲ್ಲದರ ಪರಿಣಾಮವಾಗಿ ಮಾರ್ಕ್ಸ್ ತನ್ನ ಕಾಲದಲ್ಲೇ ಅತೀ ಹೆಚ್ಚು ದ್ವೇಷಕ್ಕೊಳಗಾದ ಹಾಗೂ ಅಪಪ್ರಚಾರಕ್ಕೊಳಗಾದ ವ್ಯಕ್ತಿಯಾಗಿದ್ದ. ನಿರಂಕುಶವಾದಿ ಸರಕಾರಗಳೂ, ಗಣವಾದಿ ಸರಕಾರಗಳೂ ಸೇರಿಯೇ ತಮ್ಮ ದೇಶದಿಂದ ಆತನನ್ನು ಗಡಿಪಾರು ಮಾಡಿದವು. ಬಂಡವಾಳಶಾಹಿಗಳು-ಅವರು ಸಂಪ್ರದಾಯಸ್ಥರಾಗಿರಲಿ, ತೀವ್ರಗಾಮಿ ಪ್ರಜಾಪ್ರಭುತ್ವವಾದಿಗಳಾಗಿರಲಿ ಮಾರ್ಕ್ಸ್‌ನ ಮೇಲೆ ಅಪಪ್ರಚಾರಗಳ ಸುರಿಮಳೆಗೈಯಲು ತಮ್ಮಲ್ಲೇ ಪೈಪೋಟಿ ನಡೆಸಿದರು. ಇದ್ದೆಲ್ಲವನ್ನೂ ಆತ ಚಿಲ್ಲರೆತನವೆಂದು ತಳ್ಳಿಹಾಕಿದ. ಅತ್ಯಾವಶ್ಯಕವೆಂಬ ಸಂದರ್ಭಗಳಲ್ಲಿ ಮಾತ್ರ ಇಂಥ ಅಪಪ್ರಚಾರಗಳಿಗೆ ಉತ್ತರ ಕೊಟ್ಟ. ಸೈಬೀರಿಯದ ಗಣಿಗಳಿಂದ ಕ್ಯಾಲಿಫೋರ್ನಿಯದ ತನಕ ಇಡೀ ಯೂರೋಪ ಹಾಗೂ ಅಮೇರಿಕದಾದ್ಯಂತ ಲಕ್ಷಾಂತರ ಕ್ರಾಂತಿಕಾರಿ ಕಾರ್ಮಿಕ ಬಂಧುಗಳ ಪ್ರೀತಿ ಪಾತ್ರನಾಗಿ, ಮಾನ್ಯನಾಗಿ, ಗೌರವಪಾತ್ರನಾಗಿ ಆತ ಸಾವನ್ನಪ್ಪಿದ. ಆತನಿಗೆ ಅನೇಕ ವಿರೋಧಿಗಳಿರಬಹುದು. ಆದರೆ ಆತನಿಗೆ ಒಬ್ಬನೇ ಒಬ್ಬ ಕೂಡಾ ವೈಯಕ್ತಿಕ ವೈರಿ ಇರಲಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳಬಯಸುತ್ತೇನೆ.

ಈ ಮಹಾ ವ್ಯಕ್ತಿಯ ಹೆಸರು ಮತ್ತು ಕೃತಿ ಯುಗ-ಯುಗಗಳಲ್ಲಿ ಚಿರಸ್ಥಾಯಿಯಾಗಿ ಬಾಳುತ್ತದೆ !

17–3–1883

ಶೋಷಿತರಿಗೋಸ್ಕರ ಜೀವಮಾನ ಮುಡಿಪಿಟ್ಟಿದ್ದ ದಿ॥ ಕಾಂ॥ ಎ. ಕೆ. ಗೋಪಾಲನ್

ಕಾಂ॥ ಎ. ಕೆ. ಗೋಪಾಲನ್ ನಮ್ಮನ್ನು ಅಗಲಿ 5 ವರ್ಷಗಳು ಕಳೆದವು. ದುಡಿಯುವ ಜನರಿಗಾಗಿ, ದಲಿತ ಜನತೆಗಾಗಿ ತನ್ನ ಜೀವನವನ್ನೇ ಮುಡಿಪಾಗಿರಿಸಿ ಅವರೊಂದಿಗೆ ಒಬ್ಬನಾಗಿ ಬಾಳಿ, ಅವರ ಸುಖ, ದುಃಖ ಮತ್ತು ಆಸೆ, ನಿರಾಸೆಗಳನ್ನು ತಾನೂ ಅನುಭವಿಸಿ ಹಾಗೂ ರೈತಾಪಿ ಜನರಿಗಾಗಿ ತನ್ನ ಜೀವಮಾನವಿಡೀ ದಬ್ಬಾಳಿಕೆಗನ್ನೆದುರಿಸಿ ಪೋಲಿಸರ ಲಾಠೀ ಪೆಟ್ಟಿಗೆ ಎದೆಯೊಡ್ಡಿ ಹೋರಾಡಿದ ಅವಿಸ್ಮರಣೀಯ ವ್ಯಕ್ತಿ ಎ. ಕೆ. ಗೋಪಾಲನ್.

(ನಿಧನ. 22-3-77)

ಎ.ಕೆ.ಜಿ. ಎಂದೇ ಎಲ್ಲರಿಂದ ಆತ್ಮೀಯವಾಗಿ ಕರೆಯಲ್ಪಡುತ್ತಿದ್ದ ಗೋಪಾಲನ್ (ಜನನ-ಅಕ್ಟೋಬರ 1, 1904) ತನ್ನ ಎಳೆಯ ವಯಸ್ಸಿನಲ್ಲೇ ಮನೆ ಬಿಟ್ಟು ಗುರುವಾಯೂರು ದೇವಸ್ಥಾನ ಪ್ರವೇಶದ ಚಳುವಳಿಯಲ್ಲಿ ಭಾಗವಹಿಸಿದರು. ನಂತರ 1920 ರ ದಶಕದಿಂದೀಚೆಗೆ ದೇಶದಲ್ಲಿ ನಡೆದ ಪ್ರತಿಯೊಂದು ರಾಜಕೀಯ, ಸಾಮಾಜಿಕ ಹೋರಾಟದಲ್ಲೂ ಎ.ಕೆ.ಜಿ. ಪ್ರಮುಖ ಪಾತ್ರ ವಹಿಸಿದ್ದರು.

ಗಾಂಧೀಜಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ನಡೆಸಿದ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸುವ ಮೂಲಕ ರಾಷ್ಟ್ರೀಯ ಹೋರಾಟದ ರಂಗದಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡ ಎ.ಕೆ.ಜಿ. ಕೆಲವೇ ವರ್ಷಗಳ ಹಿಂದೆ ಕೇರಳದಲ್ಲಿ ನಡೆದ ಭೂಗ್ರಹಣ ಚಳುವಳಿ ಮತ್ತು ಪ್ರಜಾಸತ್ತೆಯ ಉಳಿವಿಗಾಗಿ ತುರ್ತು ಪರಿಸ್ಥಿತಿಯ ವಿರುದ್ಧ ನಡೆದ ರಾಜಕೀಯ ಹೋರಾಟದವರೆಗೆ ಪ್ರತಿಯೊಂದು ಹೋರಾಟದಲ್ಲೂ ಮುಂಚೂಣಿಯಲ್ಲಿದ್ದರು.

ಎ.ಕೆ.ಜಿ. ಸಂಘಟಿಸಿದ ಪಾದಯಾತ್ರೆಗಳೆಷ್ಟೋ ? ಜಾಥಾಗಳೆಷ್ಟೋ ! ಅವರು ಕೈಗೊಂಡ ಸತ್ಯಾಗ್ರಹಗಳಿಗೆ, ಉಪವಾಸಗಳಿಗೆ ಲೆಕ್ಕವಿಲ್ಲ. ತನ್ನ ಜೀವನದ ಬಹುಪಾಲು ವರ್ಷಗಳನ್ನು ಎ.ಕೆ.ಜಿ. ಜೈಲಿನಲ್ಲೇ ಕಳೆದಿದ್ದರು.

ಎ.ಕೆ.ಜಿ. ಯವರ ಎಲ್ಲಾ ಚಟುವಟಿಕೆಗಳ ಹಿಂದೆ ಮೂಲಭೂತವಾದ ಸಿದ್ಧಾಂತವೊಂದಿತ್ತು. ಇತರರಿಗಾಗಿ ದುಡಿಯುವುದು, ಹೋರಾಡುವುದು ಪ್ರತಿಯೊಬ್ಬನ ಕರ್ತವ್ಯವೆಂಬುದೇ ಆ ಸಿದ್ಧಾಂತ. ಈ ಸಿದ್ಧಾಂತವನ್ನು ನೆಚ್ಚಿಕೊಂಡವರು ತನಗಾಗಿ ಏನನ್ನೂ ಗಳಿಸಿಕೊಳ್ಳಲು ಸಾಧ್ಯವಿಲ್ಲ. ಹೆಚ್ಚೆಂದರೆ ಇನ್ನಷ್ಟು ನೋವು, ಸಂಕಷ್ಟಗಳನ್ನು ಆತ ಅನುಭವಿಸಬೇಕಾಗಬಹುದು. ಹೀಗೆ ಹೋರಾಡಿ ಸಂಕಷ್ಟಗಳನ್ನೆದುರಿಸಬೇಕೆಂದು ಯಾವ ಕಟ್ಟಳೆಯೂ ವಿಧಿಸಿಲ್ಲ. ಇದು ಕೇವಲ ಆತ್ಮಸಾಕ್ಷಿಯ ಪ್ರಶ್ನೆ. ಎ.ಕೆ.ಜಿ. ಇತರರಿಗಾಗಿ ದುಡಿಯುವ ಮೂಲಕ ಮಾರ್ಕ್ಸ್‌ವಾದ-ಲೆನಿನ್‌ವಾದವೆಂದರೆ ಕೇವಲ ಪುಸ್ತಕದ ಮಾತಲ್ಲ, ಅದು ಆರಾಮ ಖುರ್ಚಿಯ ಸಿದ್ಧಾಂತವಲ್ಲ; ಬದಲು ಕ್ರಾಂತಿಕಾರಿಯ ಜೀವನದ ಅವಿಭಾಜ್ಯ ಅಂಗವೆಂಬುದನ್ನು ತೋರಿಸಿಕೊಟ್ಟರು.

ಎ.ಕೆ.ಜಿ. ಭಾರತ ರಾಷ್ಟ್ರೀಯ ಕಾಂಗ್ರೆಸ್ ಸೇರಿ 1929 ರಿಂದ 1934ರ ವರೆಗೆ ಅದರ ಸಕ್ರೀಯ ಕಾರ್ಯಕರ್ತರಾಗಿದ್ದರು. ನಂತರ ಅವರು ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸೇರಿ ಕೇರಳದಲ್ಲಿ ಕಾಂಗ್ರೆಸ್ ಪ್ರಭಾವ ಹೆಚ್ಚಿಸಲು ಅಪಾರ ಶ್ರಮ ವಹಿಸಿದರು. ಆದರೆ ಕಾಂಗ್ರೆಸ್ ನೀತಿಯಿಂದ ಬೇಗನೇ ನಿರಾಸೆ ಹೊಂದಿ ಕಮ್ಯೂನಿಸ್ಟ ಪಕ್ಷವನ್ನು ಸೇರಿ ಅದನ್ನು ಕಟ್ಟಿ ಬೆಳೆಸಿದರು.

ಅವರೊಬ್ಬ ದೊಡ್ಡ ಮಾರ್ಕ್ಸ್‌ವಾದಿ ಸೈದ್ಧಾಂತಿಕರೇನೂ ಅಲ್ಲ, ಆದರೂ ಮಾರ್ಕ್ಸ್‌ವಾದದ ಮೂಲಸತ್ವ ಅವರ ಜೀವನ ಕ್ರಮದಲ್ಲೇ ಹಾಸುಹೊಕ್ಕಾಗಿತ್ತು.

ಮುಂದೆ ಕಮ್ಯೂನಿಸ್ಟ ಪಕ್ಷ ಇಬ್ಭಾಗವಾದಾಗ ಏ. ಕೆ. ಜಿ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ ಪಕ್ಷದ ಶ್ರೇಷ್ಠ ಮುಂದಾಳುಗಳಲ್ಲೊಬ್ಬರಾಗಿ ಪಕ್ಷಕ್ಕೆ ಯೋಗ್ಯ ಮಾರ್ಗದರ್ಶನ ನೀಡಿದರು. ತಮ್ಮ ಜೀವಮಾನದ ಅಂತ್ಯದ ವರೆಗೂ ಅವರು ಸಿ.ಪಿ.ಐ. (ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾಗಿದ್ದರು. 1952 ರಿಂದ 1977ರ ವರೆಗೂ ಅವರು ಲೋಕಸಭಾ ಸದಸ್ಯರಾಗಿ ಪ್ರತಿಯೊಂದು ಚುನಾವಣೆಯಲ್ಲೂ ಆರಿಸಿ ಬಂದಿದ್ದರು. ಸಂಸತ್ತಿನೊಳಗೂ ಶ್ರೇಷ್ಠ ಹೋರಾಟಗಾರರೆಂಬ ಖ್ಯಾತಿಗಳಿಸಿದ್ದರು. ಅಖಿಲ ಭಾರತ ಕಿಸಾನ್‌ಸಭಾ ಅಧ್ಯಕ್ಷರಾಗಿ ಅವರು ತನ್ನ ಕೊನೆಯ ಕ್ಷಣದವರೆಗೂ ಕಾರ್ಯವೆಸಗಿದ್ದರು.

ಸಾಮುದಾಯಿಕ ಮತ್ತು ರೈತ ಹೋರಾಟಗಳಿಗೆ ಪ್ರೇರೇಪಣೆ ನೀಡಿ ಅವುಗಳನ್ನು ಸಂಘಟಿಸಿದುದರಲ್ಲಿ ಎ.ಕೆ.ಜಿ. ವಹಿಸಿದ ಪಾತ್ರ ಅಮೋಘವಾದದ್ದು. ದೇಶದ ಭೂಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸುಶಕ್ತವಾದ ಸಾಮುದಾಯಿಕ ಹೋರಾಟಗಳೇ ಏಕಮಾತ್ರ ಮಾರ್ಗವೆಂಬುದನ್ನು ಏ.ಕೆ.ಜಿ. ಕಂಡುಕೊಂಡು ಅದಕ್ಕಾಗಿ ಅವಿರತ ಶ್ರಮಿಸಿದ್ದರು.

ಏ.ಕೆ.ಜಿ. ನಮ್ಮ ನಡುವೆ ಈಗಿಲ್ಲದಿದ್ದರೂ ಆ ಧೀರ ಹೋರಾಟಗಾರನ ನೆನಪು ಸದಾ ಹಸಿರು. ಅವರು ತೋರಿದ ದಾರಿಯಲ್ಲೇ ಮುನ್ನಡೆಯೋಣ! ಅವರ ಕನಸನ್ನು ನನಸು ಮಾಡಲು ಪಣತೊಡೋಣ !

ಅದುವೇ ಆ ಧೀರ ಹೋರಾಟಗಾರನಿಗೆ ನಾವು ಸಲ್ಲಿಸುವ ಉತ್ಕೃಷ್ಟ ಶ್ರದ್ಧಾಂಜಲಿ.

ಸಿ. ಪಿ. ಐ.ನ ಕರಡು ರಾಜಕೀಯ ನಿರ್ಣಯ

ಎಂ. ಬಸವಪುನ್ನಯ್ಯ

ಸರ್ವಾಧಿಕಾರ ವಿರೋಧೀ ಹೋರಾಟವನ್ನು ಶಿಥಿಲಗೊಳಿಸುತ್ತದೆ

(ಕಳೆದ ಸಂಚಿಕೆಯಿಂದ)

ಪಕ್ಷಗಳ ವಿಶ್ಲೇಷಣೆ

ಸಿ.ಪಿ.ಐ. ಕೇಳಬೇಕಾದ ಪ್ರಶ್ನೆಯೆಂದರೆ ಸಿ.ಪಿ.ಐ. (ಎಂ) ಏಕೆ ಬಿ.ಜೆ.ಪಿ. ಸೇರಿದಂತೆ ಈ ಹೆಚ್ಚಿನ ಬೂರ್ಜ್ವಾ ಭೂಮಾಲಿಕ ಪಕ್ಷಗಳನ್ನು ಕಾಂಗ್ರೆಸ್ (ಐ) ಹಾಗೂ ಅದರ ಸಹಕಾರದಿಂದ ಹೊಮ್ಮುತ್ತಿರುವ ಸರ್ವಾಧಿಕಾರದ ಅಪಾಯದ ವಿರುದ್ಧ ಹೋರಾಟದಲ್ಲಿ ಸಮರ್ಥ ಶಕ್ತಿಗಳು ಎಂದು ಪರಿಗಣಿಸುತ್ತದೆಯೆಂಬುದು ಈ ಪ್ರಶ್ನೆಯನ್ನು ನೇರವಾಗಿ ಎತ್ತಿ ಅದಕ್ಕೆ ಉತ್ತರವನ್ನು ಏಪ್ರಿಲ್ 1978ರಷ್ಟು ಹಿಂದೇನೇ ಕೊಟ್ಟಿದ್ದೆವು. "ಏಕಪಕ್ಷ ಆಡಳಿತಕ್ಕೆ ಬಲಿಯಾಗಿ ಎಲ್ಲಾ ಸ್ವಾತಂತ್ರ್ಯಗಳಿಂದ ವಂಚಿತರಾದ ಅವರು ಸರ್ವಾಧಿಕಾರದ ವಿರುದ್ಧ ಹೋರಾಟ ಹಾಗೂ ಸಂಸದೀಯ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುವ ಕೆಲಸ ಕೈಗೆತ್ತಿಕೊಳ್ಳಲೇ ಬೇಕಾಯಿತು. ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಶ್ನೆ ಸರ್ವಾಧಿಕಾರ ಮತ್ತು ಪ್ರಜಾಪ್ರಭುತ್ವದ ನಡುವಿನದ್ದು ಎಂದು ಸ್ಪಷ್ಟವಾಗಿ ಹೇಳಿ ನಾಯಕರನ್ನು, ಕಾರ್ಯಕರ್ತರನ್ನು ಹಾಗೂ ಬೆಂಬಲಿಗರನ್ನು ಮೂಲಭೂತ ಹಕ್ಕುಗಳ ಮರುಸ್ಥಾಪನೆಗಾಗಿ ಬದ್ಧವಾಗಿಸಿದರು". ಈ ಬೂರ್ಜ್ವಾ ವಿರೋಧ ಪಕ್ಷಗಳನ್ನು ಸಂಸದೀಯ ಪ್ರಜಾಪ್ರಭುತ್ವದ ರಕ್ಷಣೆಗೆ ನಿಲ್ಲುವಂತೆ ಮಾಡಿದ ಹಿನ್ನಲೆ ಇದು.

ಸಿ.ಪಿ.ಐ. (ಎಂ) ಅವರ ಮಾತನ್ನು ನಂಬಿ, ಅವರು ಪ್ರಜಾಪ್ರಭುತ್ವವಾದೀ ನಿಯಮಗಳಿಗೆ ಹಾಗೂ ವಿಧಾನಗಳಿಗೆ ಸದಾ ವಿಧೇಯರಾಗಿರುತ್ತಾರೆ ಹಾಗೂ ಸರ್ವಾಧಿಕಾರ ವಿರುದ್ಧ ಹೋರಾಟದಲ್ಲಿ ಸ್ಥಾಯಿಯಾಗಿರುತ್ತಾರೆ ಎಂದು ನಂಬಿದೆಯೇ ?

ಇಲ್ಲಿ ಕೂಡಾ ಈ ವಿಷಯದ ಬಗ್ಗೆ ನಾವು ಹತ್ತನೇ ಅಧಿವೇಶನದಲ್ಲಿ ಹೇಳಿದುದರ ಕಡೆಗೆ ನಮ್ಮ ಸಿ.ಪಿ.ಐ. ಟೀಕಾಕಾರರ ಗಮನ ಸೆಳೆಯಬಯಸುತ್ತೇವೆ. "ಎಲ್ಲರೂ ಈ ಉದ್ದೇಶಗಳಿಗೆ ಬದ್ಧರಾಗಲಿಕ್ಕಿಲ್ಲ ಎಂಬುದು ಸತ್ಯ. ವಿಚಲತೆ, ಹಿಂಜರಿಕೆ ಕಂಡುಬರಬಹುದು. ವಿಶ್ವಾಸ ಘಾತದ ಪ್ರಯತ್ನವೂ ನಡೆಯಬಹುದು. ಪ್ರಜಾಪ್ರಭುತ್ವದ ಆಕಾಂಕ್ಷೆಯನ್ನು, ಕೊಟ್ಟ ಮಾತುಗಳನ್ನು ನೆರವೇರಿಸುವಲ್ಲಿ ಜನತಾ ಪಕ್ಷದಲ್ಲಿ ಪ್ರಬಲವಾಗಿರುವ ವರ್ಗಾಹಿತಾಸಕ್ತಿ ತಡೆಯೊಡ್ಡಬಹುದು. ಅಸ್ತಿತ್ವದಲ್ಲಿರುವ ಸರ್ವಾಧಿಕಾರದ ಪೂರಕ ಅಂಶಗಳು ಸರ್ವಾಧಿಕಾರದ ವಿರುದ್ಧವಿರುವ ಶಕ್ತಿಗಳನ್ನು ಶಿಥಿಲಗೊಳಿಸಬಹುದು. ಅದು ಜನತಾ ಪಕ್ಷದೊಳಗೆ ಸರ್ವಾಧಿಕಾರೀ ಪ್ರವೃತ್ತಿಯನ್ನು ಪೋಷಿಸಬಹುದು."

1974-75 ರಿಂದೀಚಿನ ಇತಿಹಾಸ ಸಿ. ಪಿ. ಐ (ಎಂ) ನ ಈ ವಿಶ್ಲೇಷಣೆಯನ್ನು ಸಾಬೀತುಗೊಳಿಸಿದೆ.

ವಿಕೃತ ಪ್ರತಿಪಾದನೆ

ದುರದೃಷ್ಟವಶಾತ್ ಸಿ.ಪಿ.ಐ.ಸರ್ವಾಧಿಕಾರದ ಪ್ರಶ್ನೆಯನ್ನು ತಪ್ಪು ರೀತಿಯಲ್ಲಿ ಪ್ರತಿಪಾದಿಸಿ ಈಗ ಸರ್ವಾಧಿಕಾರೀ ವಿರೋಧೀ ಹೋರಾಟ ಮುಖ್ಯ ಪ್ರಶ್ನೆಯೋ ಅಥವಾ ಬಿ.ಜೆ.ಪಿ.ಯ ಬಲ-ಪ್ರತಿಕ್ರಿಯಾವಾದದ ವಿರುದ್ಧ ಹೋರಾಟ ಮುಖ್ಯ ಪ್ರಶ್ನೆಯೋ ಎಂಬುದಾಗಿ ಮಾಡಿದೆ. ಇನ್ನೊಂದು ರೀತಿಯಲ್ಲಿ ಎಡ-ಪ್ರಜಾಪ್ರಭುತ್ವ ಶಕ್ತಿಗಳು ಎರಡೂ ದುಷ್ಟ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ಬಿ.ಜೆ.ಪಿ.ಯ ಕೋಮುವಾದೀ, ಬಲ-ಪ್ರತಿಕ್ರಿಯಾವಾದೀ ರಾಜಕೀಯ ನಿಲುವಿನ ವಿರುದ್ಧ ಹೆಚ್ಚು ಒತ್ತುಕೊಟ್ಟು "ಶಾಂತಿ ಹಾಗೂ ರಾಷ್ಟ್ರೀಯ ವಿಮೋಚನೆಗೆ ಸಹಾಯ ಮಾಡುವ ಇಂದಿರಾ ಗಾಂಧಿ ಸರಕಾರದ ವಿದೇಶಾಂಗ ಧೋರಣೆ"ಯಿಂದಾಗಿ ಸರ್ವಾಧಿಕಾರೀ ಕಾಂಗ್ರೆಸ್ ಬಗ್ಗೆ ಸ್ವಲ್ಪ ಮಟ್ಟಿನ ರಿಯಾಯ್ತಿಯಿಂದ ಹೋರಾಡಬೇಕೇ ಎಂಬುದಾಗಿ ಈ ಪ್ರಶ್ನೆಯನ್ನು ಪ್ರತಿಪಾದಿಸಲಾಗಿದೆ.

ಸಿ.ಪಿ.ಐ.(ಎಂ) ಅಭಿಪ್ರಾಯದಲ್ಲಿ ಇದು ಪ್ರಶ್ನೆಯ ವಿಕೃತ ಪ್ರತಿಪಾದನೆ. ಇದು ಸರ್ವಾಧಿಕಾರ ವಿರೋಧೀ ಹೋರಾಟವನ್ನು ಮಾತ್ರವಲ್ಲ ಬಿ.ಜೆ.ಪಿ.ಯ ಕೋಮುವಾದೀ, ಪ್ರತಿಕ್ರಿಯಾವಾದೀ ರಾಜಕೀಯ ನಿಲುವಿನ ವಿರುದ್ಧ ಹೋರಾಟವನ್ನೂ ಶಿಥಿಲಗೊಳಿಸುವುದು.

ಇಂದಿರಾ ಸರಕಾರದ ವಿದೇಶೀ ಧೋರಣೆಯ ಅರಿವು ಸಿ.ಪಿ.ಐ.(ಎಂ)ಗೂ ಇದೆ. "ಅದು ಹಲವು ವಿಷಯಗಳಲ್ಲಿ ಅಲಿಪ್ತತೆ ಹಾಗೂ ಸಾಮ್ರಾಜ್ಯಶಾಹೀ ವಿರೋಧದ ಪರಿಕಲ್ಪನೆಗಳಿಗನುಸಾರವಾಗಿ ಸರಿಯಾದ ನಿಲುವು ತಳೆದಿದೆ" ಎಂದು ಹನ್ನೊಂದನೇ ಅಧಿವೇಶನದ ನಿರ್ಣಯದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಈ ಸಕಾರಾತ್ಮಕವಿಶ್ಲೇಷಣೆಯಿಂದ ಸಿ.ಪಿ.ಐ. (ಎಂ) ತಲುಪಿದ ತೀರ್ಮಾನವೇನು ? ನಮ್ಮ ರಾಜಕೀಯ ನಿರ್ಣಯ ಹೇಳುತ್ತದೆ- "ಸಾಮ್ರಾಜ್ಯಶಾಹೀ ವಿರೋಧವನ್ನು ಆಧರಿಸಿದ ವಿದೇಶೀ ಧೋರಣೆಗಾಗಿ ಹೋರಾಡುವಾಗ ಸಿ.ಪಿ.ಐ. (ಎಂ) ಹಾಗೂ ಇತರ ಎಡ-ಪ್ರಜಾಪ್ರಭುತ್ವ ಶಕ್ತಿಗಳು ಕೆಲವು ಬೂರ್ಜ್ವಾ-ಭೂಮಾಲಿಕ ಪಕ್ಷಗಳ ಸಮಯಸಾಧಕತನವನ್ನು ವಿರೋಧಿಸಬೇಕು. ಮೂಲಭೂತವಾಗಿ ಬಿ.ಜೆ.ಪಿ.ಯ ಆಳವಾದ ಸೋವಿಯೆತ್ ವಿರೋಧ ಹಾಗೂ ಕಮ್ಯೂನಿಸ್ಟ್ ವಿರೋಧದ ವಿರುದ್ಧ ಹೋರಾಡಬೇಕು...ಬಿ.ಜೆ.ಪಿ.ಯ ಅಲಿಪ್ತತೆ ವಿರೋಧೀ ದಾಳಿಯ ಗುರಿ ಭಾರತ-ಸೋವಿಯತ್ ಮೈತ್ರಿ ಒಪ್ಪಂದವನ್ನು ಶಿಥಿಲಗೊಳಿಸುವುದೇ ಆಗಿದೆ. ಅಮೇರಿಕಾದ ವಿದೇಶಾಂಗ ಧೋರಣೆಯನ್ನು ರೂಪಿಸುವವರ ಉದ್ದೇಶವೂ ಇದೇ."

ಕಾಂಗ್ರೆಸ್ [ಐ] ನೊಂದಿಗೆ ಸಹಕಾರ

ಸಿ.ಪಿ.ಐ. ಸರ್ವಾಧಿಕಾರದ ವಿರುದ್ಧ ವ್ಯಾಪಕ ರಂಗ ಏರ್ಪಡಿಸುವ ನಮ್ಮ ಘೋಷಣೆಯನ್ನು ವಿಕೃತವಾಗಿ ಪ್ರತಿಪಾದಿಸಿ ನಡುವೆ ಬಿ.ಜೆ.ಪಿ ಯ ವಿರುದ್ಧ ಕಾಂಗ್ರೆಸ್ (ಐ) ನ್ನೂ ಸೇರಿಸಿ ಎಲ್ಲಾ ಪಕ್ಷಗಳ ಹೋರಾಟದ ಪರಿಕಲ್ಪನೆಯನ್ನು ನಡುವೆ ತುರುಕಲು ತನ್ನ ರಾಜಕೀಯ ನಿರ್ಣಯದಲ್ಲಿ ಪ್ರಯತ್ನಿಸಿದೆ. "ನಮ್ಮ ಪಕ್ಷ ಹಾಗೂ ಇತರ ಎಡ ಪಕ್ಷಗಳು ಕಾಂಗ್ರೆಸ್ (ಐ) ಅಥವಾ ಅದರ ವಿಭಾಗವೂ ಸೇರಿದಂತೆ ಕೆಲವು ಬೂರ್ಜ್ವಾ ಪಕ್ಷಗಳ ಸಹಕಾರ ಪಡೆಯುವುದು ಸಾಧ್ಯ ಹಾಗೂ ಅದು ಅಗತ್ಯವೂ ಕೂಡಾ ......ಇಂತಹ ಸಹಕಾರವನ್ನು ನಿರಾಕರಿಸುವುದು ಅಥವಾ ತನ್ನ ಮೂಗಿನ ನೇರಕ್ಕೆ ಬಯಸುವುದು ಕಾಂಗ್ರೆಸ್ (ಐ) ನಾಯಕತ್ವವೇ" ಎಂದು ಅದು ಹೇಳುತ್ತದೆ.

ಅಂದರೆ ಸಿ.ಪಿ.ಐ. ಪ್ರಕಾರ ಕೆಲವು ವಿಷಯಗಳ ಮೇಲೆ ಸರ್ವಾಧಿಕಾರೀ ಇಂದಿರಾ ಕಾಂಗ್ರೆಸ್ ಪಕ್ಷದೊಂದಿಗೂ ಸಹಕಾರ ಸಾಧ್ಯ ! ಆದರೆ ಸರ್ವಾಧಿಕಾರದ ವಿರುದ್ಧ ಹೋರಾಟದಲ್ಲಿ ಬಿ.ಜೆ.ಪಿ. ಯನ್ನು ಚಿಮ್ಮಟದಿಂದಲೂ ಮುಟ್ಟಬಾರದು ! ಇವರಿಗೆ ಬೂರ್ಜ್ವಾ-ಭೂಮಾಲಿಕ ಪಕ್ಷಗಳಲ್ಲಿ ಎರಡು ವಿಧ- ಒಂದು ರಾಜಕೀಯ ಅಸ್ಪೃಶ್ಯ ಇನ್ನೊಂದು ಮುಟ್ಟಿಸಿಕೊಳ್ಳಬಹುದಾದದ್ದು. ಎಲ್ಲಾ ಪಕ್ಷಗಳನ್ನು ಮುಟ್ಟಿಸಿಕೊಳ್ಳಬಹುದು, ಬಿ ಜೆ.ಪಿ. ಮಾತ್ರ ಅಸ್ಪೃಶ್ಯ !

ಸಿ. ಪಿ. ಐ. (ಎಂ) ಬಿ. ಜೆ. ಪಿ. ಯೊಂದಿಗೆ ಐಕ್ಯತೆಯನ್ನಾಗಲೀ, ಐಕ್ಯರಂಗವನ್ನಾಗಲೀ ಪ್ರತಿಪಾದಿಸುವುದಿಲ್ಲ. "ಬಿ. ಜೆ. ಪಿ. ಯೂ ಸೇರಿದಂತೆ ಎಲ್ಲ ವಿರೋಧ ಪಕ್ಷಗಳ ಐಕ್ಯತೆ" ಯ ಘೋಷಣೆಯಂತೂ ಕೊಟ್ಟೇ ಇಲ್ಲ. ಬಿ.ಜೆ.ಪಿ. ವಿರುದ್ಧ ರಾಜಕೀಯ- ಸೈದ್ಧಾಂತಿಕ ಹೋರಾಟವನ್ನು ಸಡಿಲಗೊಳಿಸದೇ ಅದೆ ಸಮಯದಲ್ಲಿ ಸಿ.ಪಿ.ಐ. (ಎಂ) ಸರ್ವಾಧೀಕಾರ ವಿರೋಧೀ ಹಾಗೂ ಪ್ರಜಾಪ್ರಭುತ್ವ ರಕ್ಷಣೆಯ ಹೋರಾಟದಲ್ಲಿ ಬಿ.ಜೆ.ಪಿ. ಯನ್ನು ಹೊರತುಪಡಿಸುವುದಿಲ್ಲ. ಸಂಸದೀಯ ಪ್ರಜಾಪ್ರಭುತ್ವದ ರಕ್ಷಣೆಯ ನಿಲುವು ತಳೆದು ಆ ಹೋರಾಟದಲ್ಲಿ ಬಿ.ಜೆ.ಪಿ. ಭಾಗ ವಹಿಸುವುದರ ಮಟ್ಟಿಗೆ ಬಿ.ಜೆ.ಪಿ ಯ ಆ ಪಾತ್ರವನ್ನು ಸಿ.ಪಿ.ಐ. ಸೇರಿದಂತೆ ಎಲ್ಲಾ ಪಕ್ಷಗಳೂ ಗಮನಕ್ಕೆ ತಗೊಳ್ಳಬೇಕಾಗುತ್ತದೆ. ಬಿ.ಜೆ.ಪಿ. ಈಗ ಇರುವ ಸರ್ವಾಧಿಕಾರದ ವಿರುದ್ಧ ಹೋರಾಟದಲ್ಲಿ ಭಾಗವಹಿಸಲು ಸಿದ್ಧವಿರುವವರೆಗೆ ಅದನ್ನು ಇಂತಹ ಹೋರಾಟದಿಂದ ದೂರವಿಡುವುದು ರಾಜಕೀಯವಾಗಿ ಹಾಗೂ ಕಾರ್ಯತಃ ತಪ್ಪು. ಸಿ. ಪಿ. ಐ. ಏಕೆ ಇಂತಹ ಅವಾಸ್ತವ ಸ್ಲೋಗನ್ ಎತ್ತಿ ಸರ್ವಾಧಿಕಾರ ವಿರೋಧೀ ಪ್ರತಿಭಟನೆಯನ್ನು ಬುಡ ಮೇಲು ಮಾಡುತ್ತಿದೆ. ?

ಸಂಪೂರ್ಣ ತಪ್ಪು ಲೆಕ್ಕಾಚಾರ

ಬಿ.ಜೆ ಪಿ. ಯಿಲ್ಲದೆ ಎಲ್ಲಾ ಸರ್ವಾಧಿಕಾರೀ ವಿರೋಧೀ ಶಕ್ತಿಗಳನ್ನು ಒಟ್ಟುಸೇರಿಸಬಹುದೆಂದು ಸಿ.ಪಿ.ಐ. ಭ್ರಮಿಸುವಂತೆ ಕಾಣುತ್ತದೆ. ವಾಸ್ತವವಾಗಿ, ಬಿ. ಜೆ ಪಿ. ಯು ಸಿ.ಪಿ.ಐ. ಕಲ್ಪನೆಯಂತೆ ಇತರರಿಂದ ಅಷ್ಟೊಂದು ಪ್ರತ್ಯೇಕಗೊಂಡಿಲ್ಲ. ಅದನ್ನು ಇತರ ಬೂರ್ಜ್ವಾ ಭೂಮಾಲಿಕ ವಿರೋಧ ಪಕ್ಷಗಳಿಂದ ಬೇರ್ಪಡಿಸುವುದೂ ಸುಲಭವಿಲ್ಲ. ಬಿ.ಜೆ.ಪಿ. ಬೂರ್ಜ್ವಾ-ಭೂಮಾಲಿಕ ಪಕ್ಷಗಳಲ್ಲೊಂದು. ವಿರೋಧೀ ಬೂರ್ಜ್ವಾ-ಭೂಮಾಲಿಕ ಪಕ್ಷಗಳು ಬಿ.ಜೆ.ಪಿ.ಯೊಂದನ್ನೇ ಬೇರೆಯಾಗಿ ಇಡುವಷ್ಟು "ಜಾತ್ಯಾತೀತ"ವೇನೂ ಅಲ್ಲ. ಅಲ್ಲದೆ ಆಳುವ ಕಾಂಗ್ರೆಸ್ (ಐ) ಯೊಂದಿಗೆ ಅಧಿಕಾರದ ಹಾಗೂ ಚುನಾವಣೆಯ ಹೋರಾಟದಲ್ಲಿ ಅವು ಬಿ.ಜೆ.ಪಿ.ಯನ್ನು ಕಡೆಗಣಿಸುವುದೂ ಸಾಧ್ಯವಿಲ್ಲ. ಯು. ಪಿ., ಬಿಹಾರ್, ಮಧ್ಯಪ್ರದೇಶ, ರಾಜಸ್ಥಾನ, ಹರಿಯಾಣಾ, ಹಿಮಾಚಲ ಪ್ರದೇಶದಂತಹ ರಾಜ್ಯಗಳಲ್ಲಿ ಎಡಪಕ್ಷಗಳು ದುರ್ಬಲವಾಗಿವೆ ಅಥವಾ ಇಲ್ಲವೇ ಇಲ್ಲ, ಈ ರಾಜ್ಯಗಳಲ್ಲಿ ಸರ್ವಾಧಿಕಾರೀ ಕಾಂಗ್ರೆಸ್ (ಐ) ವಿರೋಧಿ ಹೋರಾಟದ ಸ್ಲೋಗನ್ ಈ ಎಲ್ಲಾ ಬೂರ್ಜ್ವಾ ವಿರೋಧ ಪಕ್ಷಗಳಿಲ್ಲದಿದ್ದರೆ ಜನಸಾಮಾನ್ಯರ ಮಟ್ಟಿಗೆ ಟೊಳ್ಳು ಮಾತುಗಳಾಗುತ್ತವೆಯಷ್ಟೆ.

ಬಿ.ಜೆ.ಪಿ.ಯನ್ನು ರಾಜಕೀಯವಾಗಿ ದೂರವಿಡುವುದರಿಂದ ಮಾತ್ರವಲ್ಲ ಇತರ ಬೂರ್ಜ್ವಾ ವಿರೋಧೀ ಪಕ್ಷಗಳ ಶಕ್ತಿ ಬಗ್ಗೆ ಸಂಪೂರ್ಣ ತಪ್ಪು ಅಂದಾಜು ಮಾಡಿ ಅವು ಲೆಕ್ಕಕ್ಕೇ ಇಲ್ಲವೆಂಬಂತೆ ಮಾಡುವುದರಿಂದಲೂ ಸಿ.ಪಿ.ಐ. ಸರ್ವಾಧಿಕಾರೀ ವಿರೋಧೀ ಹೋರಾಟವನ್ನು ದುರ್ಬಲಗೊಳಿಸುತ್ತಿದೆ. ಸಿ. ಪಿ. ಐ, ಕರಡು ನಿರ್ಣಯ ಹೇಳುತ್ತದೆ-"ಬೇರೆ ಬೂರ್ಜ್ವಾ ವಿರೋಧೀ ಪಕ್ಷಗಳ ಬಗ್ಗೆ ಹೇಳುವುದಾದರೆ ಅವು ಅಸ್ತವ್ಯಸ್ತ ಸ್ಥಿತಿಯಲ್ಲಿವೆ. ಕಾಂಗ್ರೆಸ್ (ಎಸ್) ವಿವಿಧ ಪ್ರವೃತ್ತಿಗಳಾಗಿ ಒಡೆದಿದೆ. ಲೋಕದಳ ಹಾಗೂ ಜನತಾ ಪಕ್ಷ ಎರಡೂ ಬೇರೆ ಬೇರೆ ಸ್ವಭಾವದ ವಿಭಾಗಗಳಿಂದ ಬೇರೆ ಬೇರೆ ದಿಕ್ಕುಗಳಲ್ಲಿ ಎಳೆದಾಡಲ್ಪಡುತ್ತಿವೆ. ಈ ಪಕ್ಷಗಳ ನಾಯಕರೂ ಬಿ.ಜೆ.ಪಿ.ಯೂ ಸೇರಿದಂತೆ ವಿರೋಧೀ ರಂಗ ರಚಿಸುವ ಸಮಯಸಾಧಕ ಪ್ರಯತ್ನದಲ್ಲಿದ್ದಾರೆ"ಇತ್ಯಾದಿ,

ಉದ್ದೇಶಕ್ಕೆ ಮಾರಕ

ಬೂರ್ಜ್ವಾ ಪರ್ಯಾಯ ಏರ್ಪಡಿಸುವ ಪ್ರಯತ್ನಗಳು ಗುಪ್ತವಾಗೇನಿಲ್ಲ. ಅವನ್ನು ವಿರೋಧಿಸುವ ವಿಧಾನವೆಂದರೆ ಅದನ್ನು 'ಸಂಪೂರ್ಣವಾಗಿ ಸಮಯಸಾಧಕ ಪ್ರಯತ್ನಗಳು' ಎಂದು ಖಂಡಿಸಬಿಡುವುದಲ್ಲ. ಒಂದಲ್ಲ ಒಂದು ಕೂಟ ಮಾಡಿಕೊಂಡು ಅಧಿಕಾರ ಗಳಿಸುವುದನ್ನು ಬಿಟ್ಟು ಬೇರೆ ಯಾವ 'ನೀತಿ' ತಾನೇ ಈ ಬೂರ್ಜ್ವಾ ಪಕ್ಷಗಳಿಗೆ ಮಾರ್ಗದರ್ಶಕವಾಗಬಲ್ಲದು ? ಒಗ್ಗಟ್ಟಾಗುವ ಅವರ ಪ್ರಯತ್ನಗಳಲ್ಲಿ ಸಮಯಸಾಧಕತನವನ್ನು ಅನ್ವೇಷಿಸಿ ಉಪಯೋಗವಿಲ್ಲ. ಅದನ್ನು ಸರಿಯಾದ ರಾಜಕೀಯ ಕಾರ್ಯತಂತ್ರಗಳ ಮೂಲಕವೇ ವಿರೋಧಿಸಬೇಕು. ಸರ್ವಾಧಿಕಾರೀ ಕಾಂಗ್ರೆಸ್ (ಐ) ವಿರುದ್ಧ ಹೋರಾಟಕ್ಕೆ ಅನುಕೂಲವಾಗುವಂತೆ, ಒಗ್ಗಟ್ಟಾಗ ಬಯಸುವ ಎಲ್ಲಾ ಪಕ್ಷಗಳೂ, ಗುಂಪುಗಳು ಬೇರೆ ಬೇರೆ ಪ್ರಶ್ನೆಗಳ ಮೇಲೆ ನಡೆಸುವ ಸಂಯುಕ್ತ ಕಾರ್ಯಾಚರಣೆಗೆ ಅನುಕೂಲವಾಗುವಂತೆ, ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳನ್ನು ಒದಗಿಸಿ ವ್ಯಾಪಕಗೊಳಿಸಲು ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳು ಚಾಕಚಕ್ಯತೆಯಿಂದ ಬೂರ್ಜ್ವಾ-ಭೂಮಾಲಿಕ ಪಕ್ಷಗಳ ನಡುವಿನ ಕಲಹ, ವೈರುಧ್ಯಗಳನ್ನು ಉಪಯೋಗಿಸಿಕೊಂಡರೆ ಅವರ ಪ್ರಯತ್ನವನ್ನು ಎದುರಿಸಲು ಸಾಧ್ಯ.

ಸರ್ವಾಧಿಕಾರ- ವಿರೋಧೀ ಹೋರಾಟವನ್ನು ಉದ್ದೇಶ ಪೂರ್ವಕವಾಗಿ ನಡೆಸುವಲ್ಲಿ ವಿಫಲರಾದರೆ, ಸರ್ವಾಧಿಕಾರೀ ಕಾಂಗ್ರೆಸ್ (ಐ) ವಿರುದ್ಧ ಹೋರಾಟವನ್ನು ಎಡ ಹಾಗೂ ಪ್ರಜಾಪ್ರಭುತ್ವವಾದೀ ಐಕ್ಯತೆಯ ಪ್ರಯತ್ನಗಳಿಂದ ಬೇರ್ಪಡಿಸಲು ಯತ್ನಿಸಿದರೆ ಎಡ ಶಕ್ತಿಗಳ ಶಕ್ತಿಯನ್ನು ಮಿತಿಮೀರಿ ಅಂದಾಜು ಮಾಡಿ, ಬೂರ್ಜ್ವಾ ವಿರುದ್ಧ ಪಕ್ಷಗಳು ಶಕ್ತಿಗುಂದಿದವುಗಳು ಎಂದು ಚಿತ್ರಿಸಲು ಪ್ರಯತ್ನಿಸಿದರೆ ಅದು ಎಡ ಹಾಗೂ, ಪ್ರಜಾಪ್ರಭುತ್ವ ಶಕ್ತಿಗಳ ಉದ್ದೇಶಕ್ಕೆ ಮಾರಕವಾಗುತ್ತದೆ.

(5ನೇ ಪುಟ ನೋಡಿ)

(ಕಳೆದ ಸಂಚಿಕೆಯಿಂದ)

ಕಡೆಗಣಿಸಲ್ಪಟ್ಟ ಕರ್ನಾಟಕ

ಎನ್. ಕೆ. ಉಪಾಧ್ಯಾಯ

ನೀರಾವರಿ-ವಿದ್ಯುತ್ ಉತ್ಪಾದನೆ:

ವಿದ್ಯುತ್ ಉತ್ಪಾದನೆಯಲ್ಲಿ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದ್ದ ಮೈಸೂರು ರಾಜ್ಯ, ಕರ್ನಾಟಕವಾದ ನಂತರ ವಿದ್ಯುತ್ ಪೂರೈಕೆಯಲ್ಲಿ ಚಿಂತಾಜನಕ ಪರಿಸ್ಥಿತಿಯನ್ನೆದುರಿಸುತ್ತಿದೆ. ಹೋದ ವರ್ಷ ಸಾಕಷ್ಟು ಮಳೆಯಾದ ಕಾರಣ ಸಾಕಷ್ಟು ವಿದ್ಯುಚ್ಛಕ್ತಿ ಪಡೆಯಬಹುದೆಂಬ ಆಸೆ ಮಣ್ಣು ಪಾಲಾಗಿದೆ. ಶರಾವತಿ ಪೂರೈಕೆಯ ಮುಖ್ಯ ಕೇಂದ್ರವಾಗಿದ್ದು ಮಳೆ ಅಭಾವ, ಯಂತ್ರಗಳ ದೋಷ ಮೊದಲಾದ ಹಲವಾರು ಕಾರಣಗಳಿಂದ ಸರಬರಾಜು ಅಸ್ತವ್ಯಸ್ಥಗೊಂಡಿದೆ. ಆಶಾಕಿರಣವಾಗಿದ್ದ ಕಾಳೀ ಯೋಜನೆ ಈಗ ದೊಡ್ಡ ಕರ್ಮಕಾಂಡವಾಗಿ ಎಲ್ಲರನ್ನೂ ನಿರಾಸೆಗೊಳಿಸಿದೆ. ಕೇಂದ್ರ-ರಾಜ್ಯ ಸರಕಾರಗಳ ಹೊಟ್ಟೆ ತಣಿಸುವ ಭರವಸೆಗಳೆಲ್ಲ ಮಹಾಪೂರದಲ್ಲಿ ಹರಿದು ಹೋಗಿ, ಜನರನ್ನೂ, ಉದ್ಯಮಿಗಳನ್ನೂ, ಕಂಗಾಲ ಪರಿಸ್ಥಿತಿಯಲ್ಲಿಟ್ಟಿದೆ. ಪ್ರತಿಯೊಂದು ಕಾರ್ಯದಲ್ಲಿಯೂ ರಾಜಕೀಯ ಕೈವಾಡ, ಪ್ರಭಾವಗಳು ಶರಾವತಿ, ಕಾಳಿ ವಿದ್ಯುತ್ ಯೋಜನೆಗಳಲ್ಲದೆ ಇತರ ಹಲವಾರು ಯೋಜನೆಗಳನ್ನು ನೆನೆಗುದಿಗೊಳಪಡಿಸಿವೆ. ಕೆಲವು ಜನರ ವಿರೋಧ ಬಂದ ಕೂಡಲೇ ಯೋಜನೆಗಳನ್ನು ಕೈಬಿಡುವ, ಮುಂದೂಡುವ ಚಟ ಬಿಟ್ಟು, ವಿಜ್ಞಾನಿಗಳ, ತಂತ್ರಜ್ಞರ ಅಭಿಪ್ರಾಯಗಳಿಗೆ ಮನ್ನಣೆ ಕೊಟ್ಟಿದ್ದಾದರೆ ನಮ್ಮ ರಾಜ್ಯದಲ್ಲಿರುವ ಹಲವಾರು ಯೋಜನೆಗಳನ್ನು ಕಾರ್ಯರೂಪದಲ್ಲಿ ತಂದು, ರಾಜ್ಯದ ಬೆಳವಣಿಗೆಗೆ ವಿದ್ಯುತ್ ಪೂರೈಸುವುದಷ್ಟೇ ಅಲ್ಲ, ಪರಪ್ರಾಂತಕ್ಕೂ ಪೂರೈಸುವ ಅವಕಾಶ ಒದಗುತ್ತಿತ್ತು. ಶಕ್ತಿ ಕ್ಷಾಮ ಪರಿಹರಿಸಬಹುದಿತ್ತು. ಶರಾವತಿ,ಕಾಳಿ, ವರಾಹಿ-ಬೆಡ್ತಿ,ಕೃಷ್ಣಾ ಕಾವೇರಿ ನದಿಗಳ ಯೋಜನೆ ಹಾಗೂ ಇತರ ಯೋಜನೆಗಳನ್ನು ತಕರಾರುಗಳ ಗುಂಡೇಟಿಗೆ ಅಳುಕದೆ, ಮುಂದುವರಿಸಿದ್ದಾದರೆ ಜಲವಿದ್ಯುತ್, ಶಾಖ ವಿದ್ಯುತ್, ಅಣು ವಿದ್ಯುತ್ ಮೊದಲಾದ ಯೋಜನೆಗಳನ್ನು ಶೀಘ್ರಗತಿಯಲ್ಲಿ ಕೈಗೊಂಡದ್ದಾದರೆ ಮಾತ್ರ ಈ ಕ್ಷಾಮದಿಂದ ಮೋಕ್ಷ ಪಡೆಯಬಹುದು. ಆದರೆ ಈ ವರ್ಷದ ಕೇಂದ್ರ ಬಜೆಟ್ ಇವುಗಳ ಕುರಿತು ಚಕಾರವೆತ್ತಿಲ್ಲ. ಬಜೆಟ್ ಮಾತಾಡುವಂತೆ ಮಾಡುವ ಶಕ್ತಿ ನಮ್ಮಲ್ಲಿಂದ ಆರಿಸಿ ಹೋದ ಲೋಕಸಭೆ ಸದಸ್ಯರಿಗಾಗಲೀ, ಕೇಂದ್ರ ಮಂತ್ರಿಗಳಿಗಾಗಲೀ, ರಾಜ್ಯ ಸರಕಾರಕ್ಕಾಗಲಿ ಇಲ್ಲವಲ್ಲ.

ಇಂಥದ್ದೇ ಗತಿ ನೀರಾವರಿ ಯೋಜನೆಗಳದ್ದಾಗಿದೆ. ಕಾವೇರಿ ನೀರು ಹಂಚಿಕೆ ಸಮಸ್ಯೆ ನೆನೆಗುದಿಗೆ ಬಿದ್ದಿದೆ. ಕೈಗೆತ್ತಿಕೊಂಡ ಯೋಜನೆಗಳು ವಿದ್ಯುಚ್ಛಕ್ತಿ-ನೀರಾವರಿ-ಸ್ಥಗಿತಗೊಂಡಿವೆ. ಕೃಷ್ಣಾ ಮೇಲ್ದಂಡೆ ಯೋಜನೆ ಗತಿಯೂ ಹಾಗೆಯೇ. ಇದರಂತೆಯೇ ಇತರ ನೀರಾವರಿ ಯೋಜನೆಗಳ ಗತಿ. ಕೇಂದ್ರ ಬಜೆಟ್ಟಿಗಾಗಿ ತೆರೆದಿದ್ದ ಬಾಯಿಯನ್ನು ಒಣಗಿಸಿಕೊಂಡೇ ಮುಚ್ಚಲಾಗಿದೆ. ಇದು ನಮ್ಮ ಗತಿ-ಇಂದಿರ ಹಸ್ತದ ಅಭಯದ ಮಾದರಿ.

ಇಂದಿರಾ ಗಾಂಧಿಯ ಅಧಿಕಾರ ಬಲಪಡಿಸುತ್ತ ಬಂದಂಥಾ ಕನ್ನಡ ಕುಲ ಕೋಟಿಗೆ, ಅವರ ಸಮಸ್ಯೆಗಳ ಪರಿಹಾರಕ್ಕೆ ಹಣ ಒದಗಿಸಲು ಅಸಮರ್ಥವಾದ ಕೇಂದ್ರ ಸರಕಾರ ತಮ್ಮ ಆಶೀರ್ವಾದದಿಂದಲೇ ಅಧಿಕಾರ ನಡೆಸುತ್ತಿರುವ ರಾಜ್ಯ ಸರಕಾರದ ಮೇಲೆ ಆರೋಪ ಹೊರಿಸಿದೆ. ಸಣ್ಣ ನೀರಾವರಿ, ಡೇರಿ ಅಭಿವೃದ್ಧಿ, ಮಾರ್ಕೆಟ್ ಯಾರ್ಡ್, ಉಗ್ರಾಣಗಳ ರಚನೆ, ತೋಟಗಾರಿಕೆಗಳಿಗೆ ಸಂಬಂಧಿಸಿದ ಹಲವು ಯೋಜನೆಗಳು ನಿಗದಿ ಪಡಿಸಿದ ಅವಧಿಯಲ್ಲಿ ಕಾರ್ಯಗತಗೊಂಡಿಲ್ಲೆಂದು ಹೊಸತಾಗಿ ಅರ್ಥ ಖಾತೆಯ ಉಪ-ಮಂತ್ರಿಯಾದ ಜನಾರ್ಧನ ಪೂಜಾರಿಯವರು ಮಾರ್ಚ್ 5 ರಂದು ಲೋಕಸಭೆಯಲ್ಲಿ ತಿಳಿಸಿದರು. ಸಾಕಷ್ಟು ಹಣಕಾಸು ನೆರವಿನ ಅಭಾವವೇ ಇದಕ್ಕೆ ಕಾರಣವೆಂಬುದನ್ನೂ ಒಪ್ಪಿಕೊಂಡಿದ್ದಾರೆ.

ಕರ್ನಾಟಕದ ಉಕ್ಕಿನ ಕಾರ್ಖಾನೆ, ಜಲ-ವಿದ್ಯುತ್ ಯೋಜನೆಗಳಿಗೆಲ್ಲ "ಹಣವಿಲ್ಲ" "ಧನವಿಲ್ಲ" ಮಂತ್ರ ಪಠಿಸುತ್ತಿರುವಾಗಲೇ ರಾಜೀವ ಗಾಂಧಿ ಆರಿಸಿ ಬಂದ ಅಮೇಥಿಯಲ್ಲಿ 20ಕೋಟಿ ರೂಪಾಯಿ ಬಂಡವಾಳದ ರಕ್ಷಣಾ ಉಪಕರಣಗಳ ಕಾರ್ಖಾನೆಯೊಂದನ್ನು ಸ್ಥಾಪಿಸುವ ಸಿದ್ಧತೆ ನಡೆದಿದೆ. ತಜ್ಞರ ದೃಷ್ಟಿಯಲ್ಲಿ ರಕ್ಷಣಾ ಉಪಕರಣಗಳ ಕಾರ್ಖಾನೆ ಸ್ಥಾಪನೆಗೆ ಅಮೇಥಿ ಸೂಕ್ತ ಪ್ರದೇಶವಲ್ಲ. ಅದಕ್ಕೆ ತಂಪಾದ ಮತ್ತು ಪರಿಸರ ಮಾಲಿನ್ಯ ಹಾಗೂ ಧೂಳು ಇಲ್ಲದ ಸ್ಥಳಬೇಕು. ಇದಕ್ಕೆ ಸರಿಯಾದ ಸ್ಥಳ ಬೆಂಗಳೂರು ಎಂದು ತಿಳಿಸಲಾಗಿತ್ತು. ಈಗಾಗಲೇ ವಿಮಾನ ಕಾರ್ಖಾನೆ ಇಲ್ಲಿ ಇರುವುದರಿಂದ ಕಾರ್ಖಾನೆ ಸ್ಥಾಪನೆಯ ವೆಚ್ಚವೂ ಕಡಿಮೆಯಾಗುತ್ತದೆಂದು ಹೇಳಲಾಗಿತ್ತು. ಬಿಜಾಪುರದಲ್ಲೂ ಇಂಥ ಕಾರ್ಖಾನೆ ಸ್ಥಾಪಿಸಲಾಗುವುದೆಂಬ ಆಶ್ವಾಸನೆಯನ್ನು ಹತ್ತು ವರ್ಷಗಳ ಹಿಂದೆಯೇ ಕೊಡಲಾಗಿತ್ತು. ಆದರೆ ಕನ್ನಡಿಗರಿಗೆ ಆ ಸೌಲಭ್ಯ ದೊರಕಲಿಲ್ಲ.

ಈ ರೀತಿ ಕೇಂದ್ರ ಸರಕಾರ ಕರ್ನಾಟಕವನ್ನು ಸಂಪೂರ್ಣ ಕಡೆಗಣಿಸುತ್ತಿರುವಾಗ, ಜನರ ಸಮಸ್ಯೆಗಳಿಗೆ ಪರಿಹಾರ ಕಾಣಲಾರದಾದಾಗ, ನಮ್ಮಲ್ಲಿಂದ ಆರಿಸಿ ಹೋದ ಲೋಕಸಭೆ ಸದಸ್ಯರು ಹೋರಾಡದೆ ತಮ್ಮ ನಪುಂಸಕತ್ವವನ್ನು ತೋರಿಸುತ್ತಿದ್ದಾರೆ. ಅದೇ ಸಮಯದಲ್ಲಿ ರಾಜ್ಯದ ಮುಖ್ಯ ಮಂತ್ರಿ ಗುಂಡೂರಾವ್, ಕೆ.ಪಿ.ಸಿ.ಸಿ. ಅಧ್ಯಕ್ಷ ಕೆ. ಟಿ. ರಾಠೋಡ್ ಇವರ ಭಿನ್ನಾಭಿಪ್ರಾಯ ಹೆಚ್ಚಾಗುತ್ತಿದೆ. ಇಷ್ಟರಲ್ಲೇ ಸಮಾಧಾನಗೊಳ್ಳದೆ ಕಾಂಗ್ರೆಸ್ ಪಕ್ಷದೊಳಗಿನ ಗುಂಪುಗಾರಿಕೆ - ಭಿನ್ನಾಭಿಪ್ರಾಯಗಳಿಂದಾಗಿ ಅವರೊಳಗೆ ಬೀದಿ ಕಾಳಗವೇ ನಡೆದಿದೆ. ಉಡುಪಿ, ಬಳ್ಳಾರಿ, ಬಿಜಾಪುರ ಹೀಗೆ ರಾಜ್ಯಾದ್ಯಂತ ಕಾಂಗ್ರೆಸ್ಸಿನವರು, ರಾಜ್ಯದ-ಜನರ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸದೆ, ಅಧಿಕಾರಕ್ಕಾಗಿ ಕಚ್ಚಾಡುತ್ತಿರುವ ಅಸಹ್ಯ ದೃಶ್ಯಗಳನ್ನು ನೋಡುತ್ತಿದ್ದೇವೆ.

ಕೇಂದ್ರ ಸರಕಾರದ ಮಲತಾಯಿ ಧೋರಣೆ, ತಮ್ಮ ಪಕ್ಷದೊಳಗಿನ ಒಳಜಗಳ-ಗುಂಪುಗಾರಿಕೆಗಳಿಂದಾಗಿ, ಅಸಮರ್ಥಕ, ಭ್ರಷ್ಟ ಗುಂಡೂರಾವ್ ಆಡಳಿತೆಯನ್ನು ಹೀಗೆಯೇ ಮುಂದುವರಿಸಲು ಬಿಡಬೇಕೇ, ಅಥವಾ ಇದರ ವಿರುದ್ಧ ಜನ ಸಂಪರ್ಕ ಬೆಳೆಸಿ, ಸಂಘಟನೆ ಮಾಡಿ ಹೋರಾಡಬೇಕೆ? ವಿರೋಧಿ ಪಕ್ಷಗಳೂ, ಸಾಮೂಹಿಕ ಸಂಘಟನೆಗಳೆಲ್ಲ ವಿಚಾರ ಮಾಡಬೇಕಾದ ಗಂಭೀರ ಪ್ರಶ್ನೆ ಇದಾಗಿದೆ. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೆಲ್ಲ ಒಂದಾಗಿ ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಹೇಳುತ್ತದೆ.

ಆ ರೀತಿ ಸಂಘಟನೆ ಕಟ್ಟಿ ಹೋರಾಡಿದ್ದರಿಂದಲೇ ತ್ರಿಪುರ, ಪ. ಬಂಗಾಲ, ಕೇರಳಗಳಲ್ಲಿ ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ಸನ್ನು ಸೋಲಿಸಿ ಬದ್ಲಿ ಸರಕಾರ ಸ್ಥಾಪಿಸಲು ಸಾಧ್ಯವಾಯಿತು. ಇತರ ರಾಜ್ಯಗಳಲ್ಲಿ ಮುಖ್ಯವಾಗಿ ತಮಿಳುನಾಡು, ಮಹಾರಾಷ್ಟ್ರ, ಬಿಹಾರ ಪಂಜಾಬ, ಅಸ್ಸಾಂ ಒರಿಸ್ಸಾ-ಬಲವಾದ ಚಳುವಳಿ ನಡೆಸಲು ಸಾಧ್ಯವಾಗಿದೆ. ಹಾಗೆಯೇ ಕರ್ನಾಟಕದಲ್ಲಿ ಕಾರ್ಮಿಕರ ರೈತರ ವಿದ್ಯಾರ್ಥಿಗಳ ದೀರ್ಘ ಹೋರಾಟಗಳನ್ನು ಹೂಡಲು ಸಾಧ್ಯವಾಗಿದೆ. ಹಿಂದಿನ ಹೋರಾಟದ ಅನುಭವಗಳನ್ನು ಕರಗಿಸಿಕೊಂಡು, ಆ ಹೋರಾಟಗಳಿಗಿಂತಲೂ ತೀವ್ರವಾದ, ವಿಶಾಲವಾದ ಜನತಾ ಚಳುವಳಿ ನಡೆಸಿಕೊಂಡು ಹೋಗಲು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಹಾಗೂ ಇತರ ಎಲ್ಲ ವಿರೋಧ ಪಕ್ಷಗಳೂ ಸಾಮೂಹಿಕ ಸಂಘಟನೆಗಳೂ, ಪ್ರಜಾಪ್ರಭುತ್ವ ಶಕ್ತಿಗಳೂ ಮುಂದಾಗುವುದು ಅತ್ಯಗತ್ಯ. ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗೋಣ. ಇಂದಿರಾ ಭ್ರಮೆಯನ್ನು ಇಳಿಸಲು ಪ್ರಯತ್ನ ಮಾಡೋಣ. ●

ಸರ್ವಾಧಿಕಾರ ವಿರೋಧೀ ಹೋರಾಟವನ್ನು ಶಿಥಿಲಗೊಳಿಸುತ್ತದೆ

(4ನೇ ಪುಟದಿಂದ)

1980 ರ ಲೋಕಸಭಾ ಚುನಾವಣೆಗಳ ಮತದಾನವನ್ನು ಗಮನಿಸಿದರೆ ಕಾಂಗ್ರೆಸ್ 42.68 ಶೇಕಡಾ ಮತವನ್ನು, ಈಗ ತಮ್ಮನ್ನು ಜನತಾ, ಕಾಂಗ್ರೆಸ್ (ಎಸ್) ಹಾಗೂ, ಲೋಕದಳ ಎಂದು ಕರೆದುಕೊಳ್ಳುವ ಪಕ್ಷಗಳು 33.64 ಶೇಕಡಾ ಮತವನ್ನು ಗಳಿಸಿದರೆ ಸಿ.ಪಿ.ಐ. (ಎಂ) ಹಾಗೂ ಸಿ. ಪಿ. ಐ. ಒಟ್ಟು ಸೇರಿ ಕೇವಲ 8.75 ಶೇಕಡಾ ಮಾತ್ರ ಮತ ಗಳಿಸಿಕೊಳ್ಳಲು ಸಾಧ್ಯವಾದುದನ್ನು ಸ್ಪಷ್ಟವಾಗಿ ನೋಡಬಹುದು.

ಸರ್ವಾಧಿಕಾರದ ವಿರುದ್ಧ ಹೋರಾಟದಲ್ಲಿ ಬೂರ್ಜ್ವಾ ವಿರೋಧಿ-ಪಕ್ಷಗಳನ್ನು ನಗಣ್ಯವೆಂದು ಹೇಳಿ, ಎಡ ಪಕ್ಷಗಳು ಮಾತ್ರ ಸರ್ವಾದಿಕಾರದ ವಿಪತ್ತಿನ ವಿರುದ್ಧ ಹೋರಾಡಲು ಹಾಗೂ ಎಡ-ಪ್ರಜಾಪ್ರಭುತ್ವ ಪರ್ಯಾಯ ರಚಿಸಲು ಶಕ್ತ ಎಂದು ಅಟ್ಟಹಾಸದಿಂದ ಘೋಷಿಸುವುದು ವಾಸ್ತವಿಕತೆಯೆಹಾಗಬಹುದೇ, ರಾಜಕೀಯವಾಗಿ ವಿವೇಕಯುತ ಕೆಲಸವೆನ್ನಿಸಬಹುದೇ ?

ಬಿ. ಜೆ. ಪಿ. ಯನ್ನು ಖಂಡಿಸುವ ಶಬ್ದಾಡಂಬರ ಹಾಗೂ ಬೂರ್ಜ್ವಾ ವಿರೋಧ ಪಕ್ಷಗಳ ಶಕ್ತಿಯನ್ನು ತಿರಸ್ಕಾರದಿಂದ ತಪ್ಪು ಅಂದಾಜು ಮಾಡುವ ಮೂಲಕ ಸಿ.ಪಿ.ಐ.ನ ಕರಡು ನಿರ್ಣಯ ಮಾಡಿರುವುದು ಇದನ್ನೇ. ಸರ್ವಾಧಿಕಾರೀ ಕಾಂಗ್ರೆಸ್ (ಐ) ನ ವಿರುದ್ಧ ಹೋರಾಟ ಹಾಗೂ ಎಡ ಐಕ್ಯತೆ ಮತ್ತು ಎಡ ಪ್ರಜಾಪ್ರಭುತ್ವ ಐಕ್ಯತೆಗೆ ಅನುಕೂಲವಾಗುವಂತೆ ಸಿ.ಪಿ.ಐ. ನಾಯಕತ್ವ ಈಪ್ರಶ್ನೆಯನ್ನು ಕುರಿತು ಪುನರಾಲೋಚನೆ ನಡೆಸುವುದೆಂದು ಆಶಿಸುತ್ತೇವೆ.

ಮುಂದಿನ ಲೇಖನದಲ್ಲಿ ಸಿ. ಪಿ. ಐ. ಕರಡು ನಿರ್ಣಯದ ಇತರ ವಿಷಯಗಳ ಬಗ್ಗೆ ಚರ್ಚಿಸುತ್ತೇವೆ.

(ಮುಂದುವರಿಯುವುದು)

ಪುನರ್ ನಾಮಕರಣಕ್ಕೆ ವಿರೋಧ

ಮಲಪ್ರಭಾ ನದಿಗೆ ಸುನದತ್ತಿ (ಬೆಳಗಾಂವ ಜಿಲ್ಲೆ) ಹತ್ತಿರದ ನವಿಲು ತೀರ್ಥದಲ್ಲಿ ಕಟ್ಟಿದ ಅಣೆಕಟ್ಟು (Dam) ಮಲಪ್ರಭಾ ಆಣೆಕಟ್ಟು ಎಂದು ಜನಪ್ರಿಯವಾಗಿದೆ. ಈ ಅಣೆಕಟ್ಟಿಗೆ 'ಇಂದಿರಾ ಅಣೆಕಟ್ಟು' ಎಂದು ಪುನರ್‌ನಾಮಕರಣ ಮಾಡಿರುವುದಾಗಿ 19-2-82ರ ದೈನಿಕಗಳಲ್ಲಿ ಪ್ರಕಟವಾಗಿದೆ.

ಈ ಭಾಗದ ಶಾಸಕರಾದ ಜಿ. ಕೆ. ಟಕ್ಕೇದ್, ಎಸ್. ಬಿ. ಶಿದ್ನಾಳ 12-6-81 ರಂದು ಅಣೆಕಟ್ಟನ್ನು ರಾಷ್ಟ್ರಕ್ಕೆ ಅರ್ಪಿಸುವ ನಾಟಕೀಯ ಕಾರ್ಯಕ್ರಮಕ್ಕಾಗಿ ಸವದತ್ತಿಗೆ ಆಗಮಿಸಿದ್ದ ಮುಖ್ಯ ಮಂತ್ರಿ ಗುಂಡೂರಾವ್ ರಿಗೆ, ಈ ಆಣೆಕಟ್ಟಿಗೆ ಇಂದಿರಾ ಗಾಂಧಿ ಆಣೆಕಟ್ಟು ಎಂದು ಹೆಸರಿಡಬೇಕೆಂದು ಒತ್ತಾಯಿಸಿ ಇದು ಈ ಭಾಗದ ಜನರ ಬೇಡಿಕೆಯಾಗಿದೆ ಎಂದು ಸುಳ್ಳು ಬೊಗಳಿದ್ದರು.

ಸವದತ್ತಿ, ಬೈಲಹೊಂಗಲ, ರಾಮದುರ್ಗ, ನರಗುಂದ ಮತ್ತು ನವಲಗುಂದ ಮೊದಲಾದ ತಾಲ್ಲೂಕುಗಳ ನಾಗರಿಕರ ಮತ್ತು ರೈತರ ಅಭಿಪ್ರಾಯ ಕೇಳದೆ 'ಅಮ್ಮ'ನನ್ನು ತೃಪ್ತಿಪಡಿಸಲೋಸುಗ ಇಂದಿರಾ ಆಣೆಕಟ್ಟು ಎಂದು ಮುಖ್ಯ ಮಂತ್ರಿ ಸಾರಿದ್ದು ಖಂಡನೀಯ.

ಜನ ಬೆಂಬಲವಿಲ್ಲದ ಈ ಸುತ್ತೋಲೆಯನ್ನು ಕೂಡಲೇ ವಾಪಸ್ ಪಡೆಯಬೇಕೆಂದು ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ಸಮಸ್ತ ರೈತ, ಯುವಜನ-ವಿದ್ಯಾರ್ಥಿ ಸಮುದಾಯ ಸರ್ಕಾರವನ್ನು ಒತ್ತಾಯಿಸಿದೆ.

ವಿಳಂಬ ಮಾಡಿದಲ್ಲಿ ಹೋರಾಟಕ್ಕಿಳಿಯಬೇಕಾದೀತೆಂದು ಮಲಪ್ರಭಾ ರೈತ ಸಮನ್ವಯ ಸಮಿತಿಯ ಸಂಚಾಲಕ ಎಸ್. ಎಚ್. ಕಪ್ಪಣ್ಣವರ, ಕರ್ನಾಟಕ ಪ್ರಾಂತ ರೈತ ಸಂಘ ಸವದತ್ತಿ ಘಟಕದ ಸ್ವಾಮಿ ನಿತ್ಯಾನಂದಜಿ, ಯುವಜನತಾದ ವಿಜಯ ಅತ್ತಿಗೇರಿ, ಎಸ್. ಎಫ್. ಐ. ನ ಬಿ. ಎಸ್. ಶಿಂತ್ರಿ ಮತ್ತು ಎಂ. ಪಿ. ಹೂಗಾರ ಮತ್ತಿತರರು ಎಚ್ಚರಿಸಿದ್ದಾರೆ.

ಸ್ವಾಗತ ಸಮಿತಿ ರಚನೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ (Dyfi) ಯು ಮಾರ್ಚ 28ರಂದು ನಿರುದ್ಯೋಗ ವಿರೋಧಿ ದಿನಾಚರಣೆಯ ಕಾರ್ಯಕ್ರಮ ಹಾಕಿಕೊಂಡಿದೆ. ಈ ಕಾರ್ಯಕ್ರಮದ ಅಂಗವಾಗಿ ರಾಜ್ಯಾದ್ಯಂತದಿಂದ Dyfi ಕಾರ್ಯಕರ್ತರು ರಾಜಧಾನಿಗೆ ಆಗಮಿಸಲಿದ್ದಾರೆ.

ಈ ಕಾರ್ಯಕ್ರಮದ ಕುರಿತು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ.

ಈ ಸಮಿತಿಗೆ ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು ಉಪಾಧ್ಯಕ್ಷ ಕಾಂ॥ಆರ್. ಶ್ರೀನಿವಾಸ್‌ರನ್ನು ಅಧ್ಯಕ್ಷರನ್ನಾಗಿ, Dyfi ಜಿಲ್ಲಾ ಕಾರ್ಯದರ್ಶಿ ಕಾಂ॥ ಎಸ್. ಶಿವರಾಂರನ್ನು ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಗಿದೆ.

ಸಂಬಂಧಪಟ್ಟ ಸಂಘಟಕರು ಸೈಕಲ್ ಜಾಥಾ ಹಾಗೂ ಮತ್ತು ಬೆಂಗಳೂರಿಗೆ ತಲುಪುವ ವೇಳೆ ಹಾಗೂ ಇತರ ವಿಷಯಗಳಿಗೆ ಸ್ವಾಗತ ಸಮಿತಿಯೊಂದಿಗೆ ವ್ಯವಹರಿಸಬೇಕಾಗಿ ಕೋರಿಕೆ.

ಹಿಂದೂ ಕೋಮುವಾದದ ಹೊಸ ಮುಖವಾಡ

ವಿಶ್ವ ಹಿಂದೂ ಪರಿಷತ್ತಿನ 'ಜನಜಾಗರಣ'ದ ಸತ್ಯಸ್ವರೂಪ

(ಸುಧೀಂದ್ರ ಕುಲಕರ್ಣಿ)

ಫೆಬ್ರವರಿ 1ರಿಂದ 14ರವರೆಗೆ ಮಹಾರಾಷ್ಟ್ರ ರಾಜ್ಯದಾದ್ಯಂತ ವಿಶ್ವ ಹಿಂದೂ ಪರಿಷತ್ತಿನ ಪರವಾಗಿ ಹಿಂದೂ 'ಜನಜಾಗರಣ' ಕಾರ್ಯಕ್ರಮವನ್ನು ಆಚರಿಸಲಾಯಿತು. 'ಹಿಂದೂ ಸಮಾಜವನ್ನು ಬಲಶಾಲಿಯನ್ನಾಗಿ ಮಾಡಲು ಜಾತಿ, ಸಂಪ್ರದಾಯ, ಸ್ಪೃಶ್ಯಾಸ್ಪೃಶ್ಯತೆ, ಉಚ್ಚನೀಚತೆಗಳ ಭೇದ ಅಳಿಸಿಹಾಕಿ 'ಹಿಂದೂಗಳೆಲ್ಲರೂ ಒಂದು' ಎಂಬ ಭಾವನೆಯನ್ನು ಎಚ್ಚರಿಸಲು ದಲಿತರ ಧರ್ಮಾಂತರದ ನಿಮಿತ್ತ ಮಾಡಿಕೊಂಡು ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಬಾರಾಮತಿ, ಶೋಲಾಪುರ, ಪುಣೆ ಮುಂತಾದೆಡೆಗಳಲ್ಲಿ ಭಾರಿ ಪ್ರಮಾಣದ ಕೋಮು ಗಲಭೆಗಳಿಗೆ ಪ್ರಚೋದನೆ ನೀಡಿದ ಈ ಕಾರ್ಯಕ್ರಮದಿಂದಾಗಿ (ವರದಿ: ಐಕ್ಯರಂಗ, ಮಾರ್ಚ್ 7, 82) ಹಿಂದೂ ಕೋಮುವಾದ ಒಂದು ಹೊಸ ಮುಖವಾಡ ಧರಿಸಿ ಮುಂದೆ ಬಂದಿದೆ. 'ಜನಜಾಗರಣ'ದ ಪರಿಣಾಮಗಳ ಕೊನೆಯ ಪುಟ ಈ ಗಲಭೆಗಳಿಂದಾಗಿ ತಿರುವಲ್ಪಟ್ಟಿದೆಯೆಂತಲ್ಲ, ಅಥವಾ ಈ ಪರಿಣಾಮಗಳು ಕೇವಲ ಮಹಾರಾಷ್ಟ್ರಕ್ಕೆ ಮಾತ್ರ ಸೀಮಿತ ಅಂತೂ ಅಲ್ಲ. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ನೇತೃತ್ವದಲ್ಲಿ ಶೋಷಿತ ಜನತೆಯು ವ್ಯಾಪಕ ಒಕ್ಕಟ್ಟು ನಿರ್ಮಾಣಗೊಳ್ಳಬೇಕಾಗಿರುವ, ಹಾಗೂ ನಿಧಾನವಾಗಿಯಾದರೂ ನಿಶ್ಚಿತವಾಗಿ ಈ ಒಕ್ಕಟ್ಟು ನಿರ್ಮಾಣಗೊಳ್ಳುತ್ತಿರುವ ಸಮಯದಲ್ಲಿ ಕೋಮುವಾದಿ ಹಾಗೂ ಇತರ ವಿಚ್ಛಿದ್ರಕಾರಿ ಶಕ್ತಿಗಳು ತಲೆಯೆತ್ತಿಕೊಳ್ಳುತ್ತಿರುವುದು ಅತ್ಯಂತ ಆತಂಕಕಾರಕ. ಮಹಾರಾಷ್ಟ್ರದಲ್ಲಿ ವಿಶ್ವ ಹಿಂದೂ ಪರಿಷತ್ತಿನ ಕಾರ್ಯಕ್ರಮದ ಪರೀಕ್ಷಣೆ ಇತರೆಡೆಗಳಲ್ಲೂ ಉಪಯೋಗಕಾರಿಯಾದೀತು.

ಹಿಂದೂ ಕೋಮುವಾದಕ್ಕೆ ವ್ಯಾಪಕ ಸಾಮಾಜಿಕ ಮನ್ನಣೆ ಪಡೆಯುವ ಪ್ರಯತ್ನ

ಇತ್ತೀಚಿನ ವರ್ಷಗಳಲ್ಲಿ ಮಹಾರಾಷ್ಟ್ರದಲ್ಲಿ ಹಿಂದೂ ಕೋಮುವಾದಿ ಸಂಘಟನೆಗಳ ಸಂಖ್ಯೆ ಹಾಗೂ ಚಟುವಟಿಕೆಗಳಲ್ಲಿ ಆದ ಹೆಚ್ಚಳ ಗಮನಾರ್ಹವಾಗಿದೆ. ರಾ.ಸ್ವ ಸಂಘ, ಭಾ.ಜ.ಪ., ಅ.ಭಾ.ವಿ.ಪ, ವಿಶ್ವ ಹಿಂದೂ ಪರಿಷತ್ತು ಇವುಗಳಂತೂ ಇದ್ದೇ ಇವೆ. ಆದರೆ ಹಿಂದೂ ಏಕತಾ ಆಂದೋಲನ, ಪತಿತ ಪಾವನ ಸಂಘಟನೆ, ಹಿಂದೂ ಮಹಾಸಭೆ, ಅಖಿಲ ಭಾರತೀಯ ಮರಾಠಾ ಮಹಾಸಂಘ ಎಂಬ ಹೊಸ ಸಂಘಟನೆಗಳೂ ಸ್ಪೈದಾನದಲ್ಲೀದಿವೆ. ಇಷ್ಟು ದಿನ ಕೇವಲ ದಕ್ಷಿಣ ಭಾರತೀಯರ ವಿರೋಧಿ ಕಾರ್ಯ ನಿರತವಾಗಿದ್ದ ಕುಪ್ರಸಿದ್ಧ ಶಿವಸೇನೆಯು ಇಂದು ಒಂದೆಡೆಗೆ ಕಾಂಗ್ರೆಸ್ಸಿನ ಕಾರ್ಮಿಕ ವಿರೋಧಿ ಚಟುವಟಿಕೆಗಳಲ್ಲಿ ಗೂಂಡಾಗಳನ್ನು ಪೂರೈಸುವ ಕೆಲಸ ಮಾಡುತ್ತಿದೆಯಾದರೆ ಇನ್ನೊಂದೆಡೆಗೆ ಮುಸ್ಲಿಮ್ ವಿರೋಧಿ ವಿಷ ಕಾರತೊಡಗಿದೆ. ಜನತಾ, ಕಾಂಗ್ರೆಸ್ (ಎಸ್), ಕಾಂಗ್ರೆಸ್ (ಐ) ಪಕ್ಷಗಳ ಸ್ಥಾನಿಕ ಮಟ್ಟದ ಪದಾಧಿಕಾರಿ ಮಂಡಳಿಯಲ್ಲಿ ಅನೇಕರು 'ಜನಜಾಗರಣ' ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಕೆಲವು ಮಾಜಿ ಉಪಕುಲಪತಿಗಳು, ಸಕ್ಕರೆ ಸಹಕಾರಿ ಚಳುವಳಿಯಲ್ಲಿಯ ಸಂಚಾಲಕರು, ಖಟಾವ ಮತ್ತು ಸೋಮಯ್ಯರಂಥ ಉದ್ಯೋಗಪತಿಗಳು, ಕೆಲವು ಮಾಜಿ ಸಂಸ್ಥಾನಿಕರು, ಗಣ್ಯ ಸಾಹಿತ್ಯಿಕರು ಮುಂತಾದವರ ಸಕ್ರಿಯ ಬೆಂಬಲ 'ಜನಜಾಗರಣ'ಕ್ಕೆ ಪ್ರಾಪ್ತವಿತ್ತು. ದಲಿತರ ಧರ್ಮಾಂತರದ ನಿಮಿತ್ತ ಮಾಡಿಕೊಂಡು ಆಯೋಜಿಸಲಾಗಿದ್ದರೂ ಕೂಡ ಜನಜಾಗರಣದಲ್ಲಿ ದಲಿತರ ನಿಜವಾದ ಸಮಸ್ಯೆಗಳತ್ತ ಲಕ್ಷ್ಯವಿರಲಿಲ್ಲ. ಹೊರತಾಗಿ ಈ ಕಾರ್ಯಕ್ರಮವೆಂದರೆ ಮುಸ್ಲಿಂ ವಿರೋಧಿ ಭಾವನೆಗೆ ಹಾಗೂ ಆಕ್ರಮಕ ಹಿಂದೂ ಕೋಮುವಾದಕ್ಕೆ ವ್ಯಾಪಕ ಸಾಮಾಜಿಕ ತಳಹದಿ ಹಾಗೂ ಮಾನ್ಯತೆ ದೊರಕಿಸಿಕೊಳ್ಳುವ ಪ್ರಯತ್ನವಾಗಿತ್ತು. ಈ ಸಾಮಾಜಿಕ ತಳಹದಿಯನ್ನು ವಿಶೇಷತಃ ಬ್ರಾಹ್ಮಣೇತರ ಕನಿಷ್ಠ ಹಾಗೂ ಮಧ್ಯಮ ಜಾತಿಗಳು, ಬೌದ್ಧ ಧರ್ಮ ಸ್ವೀಕರಿಸದ ಅಸ್ಪೃಶ್ಯ ಜಾತಿಗಳು, ಅಲೆದಾಡುವ ಜಮಾತುಗಳು, ಜೈನ, ಸಿಖ್ ಧರ್ಮಗಳು ಇವುಗಳಲ್ಲಿ ದೊರಕಿಸಿಕೊಳ್ಳುವ ಪ್ರಯತ್ನ ಈ ಕಾರ್ಯಕ್ರಮದಲ್ಲಿತ್ತು. ಗುಜರಾತಿ, ಮಾರವಾಡಿ ಸಮಾಜಗಳ ಜೊತೆಗೆಯೇ ನಾಭಿಕ, ಕುಂಭಾರ, ಮಾತಂಗ ಮುಂತಾದ ನಲವತ್ತಕ್ಕೂ ಹೆಚ್ಚು ಜಾತಿ ಆಧಾರಿತ ಸಂಘಟನೆಗಳು ಸಂಯುಕ್ತ ಪತ್ರಿಕೆಗಳನ್ನು ಹೊರಡಿಸಿ 'ಜನಜಾಗರಣ'ಕ್ಕೆ ಬೆಂಬಲ ವ್ಯಕ್ತಪಡಿಸಿದ್ದವು. ವ್ಯಾಪಕ ತಳಹದಿಯನ್ನು ಪಡೆಯುವ ತಮ್ಮ ಪ್ರಯತ್ನಗಳಲ್ಲಿ ಹಿಂದುತ್ವವಾದಿ ಸಂಘಟನೆಗಳಿಗೆ ಕೆಲಮಟ್ಟಿಗೆ ಯಶಸ್ಸು ದೊರೆತಿದೆಯೆಂಬುದಕ್ಕೆ ಒಂದು ಪುರಾವೆಯೆಂದರೆ, ಈ ಸಂಘಟನೆಗಳಲ್ಲಿ ಆಗುತ್ತಿರುವ ಬ್ರಾಹ್ಮಣೇತರ ವ್ಯಕ್ತಿಗಳ ಭರತಿ. ಒಂದು ಕಾಲಕ್ಕೆ ರಾ.ಸ್ವ. ಸಂಘ ಮುಂತಾದ ಹಿಂದೂ ಕೋಮುವಾದಿ ಸಂಘಟನೆಗಳಲ್ಲಿ ಬ್ರಾಹ್ಮಣರದೇ ವರ್ಚಸ್ಸು ಹಾಗೂ ಬಹುಸಂಖ್ಯೆ ಎಂಬುದು ಎಲ್ಲರೂ ಒಪ್ಪಿಕೊಂಡ ವಿಷಯವಾಗಿತ್ತು. ಆದರೆ ಇಂದು ಒಟ್ಟು ಪರಿಸ್ಥಿತಿಯಿಂದ ಸಂತೃಪ್ತಗೊಂಡು ಬ್ರಾಹ್ಮಣೇತರ ಯುವಕರೂ ಇಂಥ ಸಂಘಟನೆಗಳಲ್ಲಿ ಸೇರಿಕೊಳ್ಳುತ್ತಿರುವುದನ್ನು ನಾವು ಕಾಣಬಹುದು. 'ಜನಜಾಗರಣ'ದ ವ್ಯಾಸಪೀಠದ ಮೇಲಿಂದ ಯಾವ ರೀತಿ ಹಿಂದೂ ಧರ್ಮದ ಉಧೋ ಉಧೋ ಆಯಿತು ಹಾಗೂ ಅತ್ಯಂತ ಮುಕ್ತವಾಗಿ ಮುಸ್ಲಿಂ ವಿರೋಧಿ ಪ್ರಚಾರ ನಡೆಯಿತು ಎಂಬುದನ್ನು ನೋಡಿದರೆ ಫ್ಯಾಸಿಜಂ ಹಾಗೂ ಕೋಮುವಾದಗಳ ನಡುವಿನ ಸಾಮ್ಯ ಸ್ಪಷ್ಟವಾಗುತ್ತದೆ.

ಈ 'ಜನಜಾಗರಣ'ದ ಕಾರ್ಯಕ್ರಮವನ್ನು ವಿಶ್ವಹಿಂದೂ ಪರಿಷತ್ತಿನ ಬ್ಯಾನರಿನ ಕೆಳಗೆಯೇ ಏಕೆ ಆಯೋಜಿಸಲಾಯಿತು ಎಂಬುದನ್ನು ಪರೀಕ್ಷಿಸಲು ಹಿಂದುತ್ವನಿಷ್ಠ ಸಂಘಟನೆಗಳಲ್ಲಿ ವಿ.ಹಿಂ.ಪ.ನ ಸ್ಥಾನ ಹಾಗೂ ಭೂಮಿಕೆ ಏನೆಂಬುದನ್ನು ನೋಡುವುದು ಅಗತ್ಯ.

1948ರಲ್ಲಿ ಗಾಂಧಿ ವಧೆಯ ನಂತರ ರಾ.ಸ್ವ. ಸಂಘವನ್ನೊಳಗೊಂಡು 'ಸಂಘ' ಪರಿವಾರದ ಇತರೆಲ್ಲ ಗುಂಪುಗಳ ಬಗ್ಗೆ ಬಹುಜನ ಸಮಾಜದಲ್ಲಿ ಅತ್ಯಂತ ಪ್ರತಿಕೂಲ ಮತವಿತ್ತು. ಅಂತೆಯೇ 1964ರಲ್ಲಿ 'ಹಿಂದೂಗಳ ಆಧ್ಯಾತ್ಮಿಕ ಹಾಗೂ ನೈತಿಕ ಮೌಲ್ಯಗಳ ಸಂರಕ್ಷಣೆ ಹಾಗೂ ಸಂವರ್ಧನೆಗಾಗಿ ಹಿಂದೂಗಳ ಬಲಶಾಲಿ ಸಾಂಸ್ಕೃತಿಕ ಸಂಘಟನೆ ಕಟ್ಟುವ' ಜನಾಕರ್ಷಕ ಉದ್ದೇಶದಿಂದ ವಿ.ಹಿಂ. ಪರಿಷತ್ತಿನ ಸ್ಥಾಪನೆಯಾಯಿತು. ದೇಶದ ಎಲ್ಲ ಜಿಲ್ಲೆಗಳಲ್ಲಿ ಹಾಗೂ ಜಗತ್ತಿನ 37 ಕೇಂದ್ರಗಳಲ್ಲಿ ಪರಿಷತ್ತಿನ ಕೆಲಸಸಾಗುತ್ತಿದೆ. ಧರ್ಮಾಂತರಿತ ವ್ಯಕ್ತಿಗಳ ಶುದ್ಧೀಕರಣ, ಆದಿವಾಸಿಗಳಿಗಾಗಿ ವಸತಿಗೃಹ, ಆಸ್ಪತ್ರೆ, ಮಂದಿರಗಳ ಜೀರ್ಣೋದ್ಧಾರ ಇತ್ಯಾದಿ ಕೆಲಸಗಳನ್ನು ತನ್ನ ಪ್ರಚಾರಕಾರ್ಯದಲ್ಲಿ ಕೇಂದ್ರ ಭಾಗದಲ್ಲಿಟ್ಟಿದ್ದುದರಿಂದ ವಿ.ಹಿಂ. ಪರಿಷತ್ತಿನ ಕೋಮುವಾದಿ ಸ್ವರೂಪ ಆರ್.ಎಸ್.ಎಸ್.ನಂಥ ಸಂಘಟನೆಗಳಿಗಿಂತ ವಿಭಿನ್ನವಾಗಿದೆ. ಅಂತೆಯೇ ಪೇಜಾವರ ಮಠಾಧೀಶರಂತಹ ತಥಾಕಥಿತ 'ಸುಧಾರಣಾವಾದಿ'ಗಳೂ ಹಾಗೂ ಆರ್.ಎಸ್.ಎಸ್ನೊಂದಿಗೆ ಕೈಕೂಡಿಸಲು ಕುಸು ಹಿಂಜರಿಯುವ ಇತರ ಬಲಪಕ್ಷಗಳ ಹಿಂಬಾಲಕರನ್ನೂ ಪರಿಷತ್ತಿನ ಛತ್ರದಲ್ಲಿ ಸುಲಭವಾಗಿ ಸೇರಿಕೊಳ್ಳುತ್ತಾರೆ. ವಿ.ಹಿಂ.ಪ.ನ ಹೆಸರಿನ ಮೇಲೆ ಇಂದಿನ ವರೆಗೆ (ಮಹಾರಾಷ್ಟ್ರದಲ್ಲಂತೂ) ಹೊಡೆದಾಟ, ಖೂನಿ, ಗೂಂಡಾಗಿರಿಗಳು ನಡೆದಿಲ್ಲ, ಆದ್ದರಿಂದಲೇ ಇಂದಿನ ವಿಶಿಷ್ಟ ಕಾಲದಲ್ಲಿ ಮುಸ್ಲಿಂ ವಿರೋಧಿ ಭಾವನೆಯನ್ನು ಕೆರಳಿಸಲು 'ಸಂಘೀ' ಪರಿವಾರಕ್ಕೆ ಈ ಸಂಘಟನೆಯೇ ಮುಂದಾಳಾಗಿರುವುದು ಯೋಗ್ಯವೆನಿಸಿತು.

ಮಹಾಪುರುಷರ ವಿಚಾರಗಳ ವಿಕೃತೀಕರಣ

'ಜನಜಾಗರಣ'ದ ಮೆರವಣಿಗೆಗಳಲ್ಲಿ ಮನುಸ್ಮೃತಿ ಹಾಗೂ ವೇದಗಳೊಂದಿಗೆಯೇ ಅಂಬೇಡ್ಕರ್, ಬುದ್ಧ, ಗಾಂಧಿ ಹಾಗೂ ಜ್ಯೋತಿಬಾ ಫುಲೆ ಅವರ ಫೋಟೋಗಳಿದ್ದವು. ನಿನ್ನೆ ಮೊನ್ನೆಯ ವರೆಗೆ ಗಾಂಧಿ, ಅಂಬೇಡ್ಕರ್, ಫುಲೆ ಇತ್ಯಾದಿ ವ್ಯಕ್ತಿಗಳ ನಾಮೋಲ್ಲೇಖ ಕೂಡ ಮಾಡದಿದ್ದ ಈ ಹಿಂದೂ ಸಂಘಟನೆಗಳು ಈಗೀಗ ತಮ ಭಾಷಣ, ಲೇಖನ, ಪೋಸ್ಟರುಗಳ ಮೂಲಕ ಸಮಾಜ ಸುಧಾರಕರ ಹೆಸರೆತ್ತಿ ಮುಸ್ಲಿಂ ವಿರೋಧಿ ಭಾವನೆ ಹೊತ್ತಿಸತೊಡಗಿವೆ. ಹಿಂದೂ ಮುಸ್ಲಿಂ ಐಕ್ಯಕ್ಕಾಗಿ ಸತತವಾಗಿ ಪ್ರಯತ್ನಿಸಿದ ಹಾಗೂ ಅದಕ್ಕಾಗಿ ಹಿಂದೂ ನರಭಕ್ಷಕರ ಗುಂಡಿಗೆ ಬಲಿಯಾದ ಗಾಂಧಿಯವರನ್ನು ಹಿಂದೂ ಜಾಗೃತಿಯ ಭಾಷ್ಯಕಾರವೆಂದಾಗಿ ಮುಂದೆ ತರಲಾಗುತ್ತಿದೆ. ಗಾಂಧಿಯವರ ಸರ್ವಧರ್ಮ ಸಮಭಾವ, ಉದಾರ ಮತವಾದ ಹಾಗೂ ರಾಜಕೀಯ ಸ್ವಾತಂತ್ರ್ಯನಿಷ್ಠೆಗಳನ್ನು ಪ್ರಚಾರಗೊಳಿಸುವ ಬದಲಾಗಿ ಗಾಂಧಿ 'ಹಿಂದೂ' ಆಗಿದ್ದುದು ಹೇಗೆ ಎಂಬುದನ್ನು ತೋರಿಸುವ ಆಟಾಟೋಪ ನಡೆಯುತ್ತಿದೆ. ಗಾಂಧಿಯವರ ಸಂಕೀರ್ಣ ವ್ಯಕ್ತಿತ್ವದಲ್ಲಿಯ ಪ್ರತಿಗಾಮಿತನವನ್ನು ಬಯಲಿಗೆಳೆಯಲೇಬೇಕಾದರೂ ಹಿಂದೂ-ಮುಸ್ಲಿಂ ಐಕ್ಯಕ್ಕಾಗಿ ಅವರು ಮಾಡಿದ ಪ್ರಯತ್ನಗಳನ್ನು ಯಾರೂ ಕಡೆಗಣಿಸಲಾಗದು.

> ವೈದಿಕ ಪರಂಪರೆಯನ್ನು ಧಿಕ್ಕರಿಸಿದ ಬುದ್ಧನನ್ನು ಹಿಂದೂ ಪರಂಪರೆಯು ಓಂ ಸ್ವಾಹಾ ಮಾಡಿ ದಶಾವತಾರದಲ್ಲಿ ಒಂದು ಅವತಾರವನ್ನಾಗಿ ಮಾಡಿಬಿಟ್ಟಿತು. ಇಂದು ಫುಲೆ-ಅಂಬೇಡ್ಕರರ ಬಗ್ಗೆ ಇದೇ ರೀತಿ ನಡೆದಿದೆ. ಯಾವ ಹಿಂದೂ ಜನಜಾಗರಣ ಮೆರವಣಿಗೆಗಳಲ್ಲಿ ವೇದ, ಮನುಸ್ಮೃತಿಗಳಿದ್ದವೋ, ಸಾವರಕರ, ಹೆಗಡೆವಾರ, ಗೋಳವಲಕರ ಇದ್ದರೋ, ಅವರ ಬದಿಯಲ್ಲಿಯೇ ಬುದ್ಧ, ಫುಲೆ, ಅಂಬೇಡ್ಕರರೂ ಇದ್ದರು !

ಮಹಾರಾಷ್ಟ್ರದಲ್ಲಿ ಉಚ್ಚ ವರ್ಣೀಯರ ಜಾತೀಯವಾದದ ವಿರೋಧದಲ್ಲಿ ಪ್ರಚಂಡ ಕಾರ್ಯಮಾಡಿದ ಜ್ಯೋತಿಬಾ ಫುಲೆಯವರು ಮಾನವ ಕೇಂದ್ರಿತ ಧರ್ಮದ ಕಲ್ಪನೆ ಮಂಡಿಸಿ ಸಾರ್ವಜನಿಕ ಸತ್ಯಧರ್ಮದ ಸ್ಥಾಪನೆ ಮಾಡಿದರು. ಅವರು ದೇವರ ಅಸ್ತಿತ್ವವನ್ನು ನಂಬಿದರೂ ಕೂಡ ಹಿಂದೂಗಳ ಪುರಾಣ ಗ್ರಂಥಗಳನ್ನು ಹಾಗೂ ವೇದಗಳಲ್ಲಿಯ ಆಧ್ಯಾತ್ಮವನ್ನು ಅಲ್ಲಗಳೆದರು. ಫುಲೆಯವರ ಒಟ್ಟು ಬಹುಜನ ಸಮಾಜನಿಷ್ಠ, ಜಾತಿವಿರೋಧಿ ಕಾರ್ಯದಲ್ಲಿ ಧರ್ಮವಿಷಯತ ಪ್ರಚಾರಕ್ಕೆ ಅತ್ಯಲ್ಪ ಸ್ಥಾನವಿತ್ತು. 'ಬ್ರಾಹ್ಮಣ್ಯ'ದೊಂದಿಗೆ ಅಖಂಡವಾಗಿ ಹೋರಾಡಿ, ವೇದ-ಪುರಾಣಗಳ ತತ್ವಗಳಿಗೆ ಬೀದಿಯಲ್ಲಿ ಸವಾಲುಹಾಕಿ, ಪುರೋಹಿತವರ್ಗದ ಶೂದ್ರರ ಕುರಿತಾದ ಕಾರಸ್ಥಾನಗಳನ್ನು ಫುಲೆಯವರು ಬೆಳಕಿಗೆ ತಂದರು. ಸಾಹುಕಾರರು ಹಾಗೂ ಜಮೀನುದಾರರ ರೈತಾಪಿವರ್ಗದ ಮೇಲಿನ ಶೋಷಣೆಯ ವಿರುದ್ಧ ದನಿಯೆತ್ತಿದರು. ಫುಲೆಯವರ ಶಿವಾಜಿಯು 'ರೈತಕುಳಗಳ ಕೇರಿಯನ್ನು ಭೂಷಿಸುವ' ಶಿವಾಜಿಯಾಗಿದ್ದ. ಶಿವಸೇನೆ ಹಾಗೂ ವಿ.ಹಿಂ. ಪರಿಷತ್ತುಗಳು ಆಕಾಶದೆತ್ತರ ಬೆಳೆಸಿದ ಮುಸ್ಲಿಂ ವಿರೋಧಿ ಛತ್ರಪತಿ ಎಂಬ ಶಿವಾಜಿಯ ಪ್ರತಿಮೆಯನ್ನು ಫುಲೆಯವರು ಎಂದೂ ಮುಂದೆ ತರಲಿಲ್ಲ. ಫುಲೆಯವರ ಈ ಎಲ್ಲ ಕಾರ್ಯ ಹಾಗೂ ವಿಚಾರಗಳನ್ನು ಮುಚ್ಚಿ ಹಾಕಿ ಅವರನ್ನು ಹಿಂದೂ ಜಾಗರಣದ ಭಾಷ್ಯಕಾರ ಎಂದು ಸಲೀಸಾಗಿ ಮುಂದೆ ತರಲಾಗುತ್ತಿದೆ. ಬ್ರಾಹ್ಮಣೇತರ ಸಮಾಜವನ್ನು ನವಹಿಂದುತ್ವವಾದಿ ಪ್ರಭಾವ ವರ್ತುಳದಲ್ಲಿ ಜಗ್ಗಿಕೊಳ್ಳುವ ಪ್ರಯತ್ನವಿದು.

ಅಂಬೇಡ್ಕರರಂತೂ ಮನುಸ್ಮೃತಿಯನ್ನು ಸುಟ್ಟರು. ಕರ್ಮಕಾಂಡದ, ಯಜ್ಞದ ಧಂದೆ ನಡೆಸಿ 'ಮೋಕ್ಷದ' ಗುತ್ತೇದಾರರಾಗಿ ಬೆಳೆದಿದ್ದ ಪುರೋಹಿತರನ್ನು ಹಾಗೂ ವೇದಪ್ರಣೀತ ವೈದಿಕ ಧರ್ಮವನ್ನು ವಿರೋಧಿಸಿ ಬುದ್ಧನು ಆಹ್ವಾನವಿತ್ತಿದನು. ವೈದಿಕ ಧರ್ಮವು ಸ್ತ್ರೀ-ಶೂದ್ರಾದಿಗಳಿಗೆ ಆಧ್ಯಾತ್ಮಿಕ ಅಧಿಕಾರವನ್ನು ನಿರಾಕರಿಸಿದ್ದರೆ, ಬುದ್ಧನು ಅವರಿಗೆ ಈ ಅಧಿಕಾರಗಳನ್ನು ತನ್ನ ಧರ್ಮದಲ್ಲಿ ನೀಡಿದನು. ಜಗತ್ತಿನಲ್ಲಿಯ ಇತರೆಲ್ಲ ಧರ್ಮಗಳಿಗಿಂತ ಬುದ್ಧಧರ್ಮದಲ್ಲಿ ಅಂಬೇಡ್ಕರರಿಗೆ ಈ ವಿಶೇಷ ಗುಣಗಳು ಕಂಡುಬಂದವು. 1. ಈಶ್ವರನಿಗೆ ನಕಾರ 2. ಜಗತ್ತಿನಲ್ಲಿಯ ದುಃಖದ ವಿನಾಶ ಸಾಧ್ಯವಿದೆ. 3. ಎಲ್ಲ ಮಾನವರಿಗೂ ಸಮಾನ ನೀತಿ ನಿಯಮಗಳು ಇರಬೇಕು.

ಮೀನಾಕ್ಷಿಪುರಂ ಧರ್ಮಾಂತರದ ನಂತರ ವಿಶ್ವ ಹಿಂದೂ ಪರಿಷತ್ತು ಅಂಬೇಡ್ಕರರು ಇಸ್ಲಾಂ ಧರ್ಮ ಸ್ವೀಕರಿಸಲಿಲ್ಲವೆಂದೂ, ಮೂಲ ಹಿಂದೂ ಆಗಿದ್ದುದರಿಂದ ಹಿಂದೂ ಧರ್ಮದ ಸಹೋದರವಾದ ಬೌದ್ಧ ಧರ್ಮವನ್ನು ಸ್ವೀಕರಿಸಿದರೆಂದೂ ತನ್ನ ಪ್ರಚಾರದಲ್ಲಿ ದಲಿತರಿಗೆ ಬೋಧಿಸಿತು. ನಿಜವಾಗಿ ನೋಡಿದರೆ ಅಂಬೇಡ್ಕರರು ಯಾವ ಕಾರಣಗಳಿಗಾಗಿ ಹಿಂದೂ ಧರ್ಮ ತ್ಯಜಿಸಿದರೋ ಆ ಕಾರಣಗಳಿಂದಾಗಿಯೇ ಇಸ್ಲಾಂ ಧರ್ಮ

(7 ನೆಯ ಪುಟವನ್ನು ನೋಡಿ).

ವಿಶ್ವ ಹಿಂದೂ ಪರಿಷತ್ತಿನ 'ಜನಜಾಗರಣ'ದ ಸತ್ಯಸ್ವರೂಪ

(6 ನೆಯ ಪುಟದಿಂದ)

ವನ್ನು ಸ್ವೀಕರಿಸಲಿಲ್ಲ. ಆದರೆ ಇಂದು ಹಿಂದೂ ಕೋಮುವಾದಿಗಳು ಅವರನ್ನು 'ಹಿಂದೂ' ಎಂದು ಚಿತ್ರಿಸುತ್ತಿದ್ದಾರೆ. ಹಾಗೂ ಅವರ ಹೆಸರನ್ನು ಬಳಸಿ ದಲಿತರ ಮಧ್ಯೆ ಮುಸ್ಲಿಂ ವಿರೋಧಿ ಭಾವನೆಗಳನ್ನು ಬಿತ್ತುತ್ತಿದ್ದಾರೆ.

ಗತಕಾಲದ ಪುರೋಗಾಮಿ ಸಮಾಜ ಸುಧಾರಕರ ವಿಚಾರ, ಕಾರ್ಯಗಳನ್ನು ವಿಕೃತಗೊಳಿಸಿ, ಮೊಟಕುಗೊಳಿಸಿ ಸಮಾಜದಲ್ಲಿಯ ಅವರ ಪ್ರಭಾವ, ಪ್ರತಿಷ್ಠೆಗಳನ್ನು ತಮ್ಮ ಸಂಕುಚಿತ ಹಿತ ಸಾಧನೆಗಾಗಿ ಪ್ರತಿಗಾಮಿಗಳು ಹವಣಿಸುತ್ತಿರುತ್ತಾರೆಂಬುದು ಇತಿಹಾಸಕ್ಕೆ ಹೊಸತೇನೂ ಅಲ್ಲ. ಎಲ್ಲ ಕಾಲಕ್ಕೂ, ಎಲ್ಲ ದೇಶಗಳಲ್ಲೂ ಇದಕ್ಕೆ ಉದಾಹರಣೆಗಳು ದೊರೆಯುತ್ತವೆ. ವೈದಿಕ ಪರಂಪರೆಯನ್ನು ಧಿಕ್ಕರಿಸಿದ ಬುದ್ಧನನ್ನು ಹಿಂದೂ ಪರಂಪರೆಯು ಓಂ ಸ್ವಾಹಾ ಮಾಡಿ ದಶಾವತಾರದಲ್ಲಿ ಒಂದು ಅವತಾರವನ್ನಾಗಿ ಮಾಡಿ ಬಿಟ್ಟಿತು. ಇಂದು ಫುಲೆ-ಅಂಬೇಡ್ಕರರ ಬಗ್ಗೆ ಇದೇ ರೀತಿ ನಡೆದಿದೆ. ಯಾವ ಹಿಂದೂ ಜನಜಾಗರಣ ಮೆರವಣಿಗೆಗಳಲ್ಲಿ ವೇದ,ಮನುಸ್ಮೃತಿಗಳಿದ್ದವೋ, ಸಾವರಕರ, ಹೆಗಡೆವಾರ, ಗೋಳವಲಕರ ಇದ್ದರೋ, ಅವರ ಬದಿಯಲ್ಲಿಯೇ ಬುದ್ಧ ಫುಲೆ, ಅಂಬೆಡ್ಕರರು ಇದ್ದರು !

ಹಿಂದೂ ಕೋಮುವಾದದ ಹೊಸ ಆಕ್ರಮಕತೆ

“ಜನಜಾಗರಣ”ದಲ್ಲಿ ದಲಿತರ ಸಮಸ್ಯೆಗಳ ಬಗ್ಗೆ ಸಾಕಷ್ಟು ಮೊಸಳೆ ಕಣ್ಣೀರು ಕೂಡ ಸುರಿದಾಯಿತು. ಆದರೆ ಮೀಸಲಾತಿ ಸ್ಥಳಗಳ ರಕ್ಷಣೆ ಹಾಗೂ ಜಾರಿಗೆ ತರುವಿಕೆ, ಮರಾಠವಾಡಾ ವಿಶ್ವವಿದ್ಯಾಲಯದ ನಾಮಾಂತರದ ಪ್ರಶ್ನೆ, ಕನಿಷ್ಠ ವೇತನ, ದಲಿತರ ಕಸಿದುಕೊಳ್ಳಲಾದ ಜಮೀನಿನ ಪ್ರಶ್ನೆ, ದಲಿತರ ಮೇಲೆ ನಡೆದ ಭೀಷಣ ಹತ್ಯಾಕಾಂಡಗಳು ಇವುಗಳ ಉಚ್ಚಾರ ಕೂಡ “ಜನಜಾಗರಣ”ದಲ್ಲಿರಲಿಲ್ಲ. ಇದರ ಮೇಲಿಂದಲೇ ಅವರ ದಲಿತ ಪ್ರೇಮ ಹಾಗೂ ಸಹಾನುಭೂತಿ ಅದೆಷ್ಟು ಎಂಬುದು ಗೊತ್ತಾಗುತ್ತದೆ.

'ಜನಜಾಗರಣ'ದ ಸಂಪೂರ್ಣ ದೃಷ್ಟಿಕೋನವು ಮುಸ್ಲಿಂ ವಿರೋಧಿಯಾಗಿತ್ತು. ಮುಸ್ಲಿಮರು ಕುಟುಂಬ ಯೋಜನೆ ಪಾಲಿಸುವುದಿಲ್ಲ, ಅವರೆಲ್ಲರೂ ರಾಷ್ಟ್ರದ್ರೋಹಿಗಳು, ಧರ್ಮಾಂತರವೆಂದರೆ ರಾಷ್ಟ್ರಾಂತರ, ಪರಕೀಯ ಹಣ ಬಳಸಿ ದಲಿತರಿಗೆ ಆಮಿಷ ತೋರಿಸಿ ಮುಸ್ಲಿಮರು ದೇಶವನ್ನೇ ಕಬಳಿಸಲೆತ್ನಿಸುತ್ತಿದ್ದಾರೆ, ಈ ರಾಷ್ಟ್ರಸಂಕಟವನ್ನು ಹತ್ತಿಹಾಕಲು ಹಿಂದೂಗಳೇ ಒಂದಾಗಿರಿ, ಬಲಿಷ್ಠರಾಗಿರಿ ಎಂದು ಪ್ರಚಾರ ಸಾಗಿತ್ತು. ಅತ್ಯಂತ ಪ್ರಸಿದ್ಧವಾದ, ಸಾವಿರಾರು ವಾಚಕವೃಂದ ಹೊಂದಿದ ಮರಾಠಿ ವಾರಪತ್ರಿಕೆಯೊಂದರಲ್ಲಿ ಸಂಪಾದಕೀಯ ಹೀಗಿತ್ತು; “ಇಂದು ನಿಶ್ಚಯವಾಗಿಯೂ ಅಲ್ಪಸಂಖ್ಯಾತರಾಗಿದ್ದಾಗಲೂ ಕೂಡ ಮುಸ್ಲಿಮರು ತಿಂದು ಕೊಬ್ಬಿದ್ದಾರೆ, ಸೊಕ್ಕಿನಿಂದ ವರ್ತಿಸ್ತಾರೆ. ಅವರಿಗೆ ಭಾರತೀಯ ಶಾಸನದ, ಕಾಯಿದೆಯ ಹಾಗೂ ಬಹುಸಂಖ್ಯ ಹಿಂದೂಗಳ ಭಯ ಅನಿಸುವುದಿಲ್ಲ. ಇದಕ್ಕೆ ಏಕಮೇವ ಕಾರಣವೆಂದರೆ ಹಿಂದೂಗಳು ಇದುವರೆಗೆ ಅಂಥ ಭೀತಿಯನ್ನೇನೂ ಹುಟ್ಟಿಸಿಯೇ ಇಲ್ಲ!”

ಈ ಜನಜಾಗರಣ ಹೇಗಿರಬೇಕೆಂಬುದನ್ನು ಸಂಪಾದಕೀಯವು ಹೇಳುತ್ತದೆ; “ಹಿಂದೂ ಜನಜಾಗರಣದಲ್ಲಿ ಮೊದಲು ನಾವು ನಮ್ಮ ಧರ್ಮದ ಔದಾರ್ಯ ಹಾಗೂ ಸಹಿಷ್ಣುತೆಗಳ ಗುಣಗಾನ ಮಾಡುವುದನ್ನು ನಿಲ್ಲಿಸಬೇಕು. ಹಿಂದೂ ಧರ್ಮದ ಔದಾರ್ಯ, ಸಹಿಷ್ಣುತೆಗಳು ಕೇವಲ ಹಿಂದೂ ಸಮಾಜಕ್ಕಾಗಿ ಮಾತ್ರ ಮೀಸಲಾದ ಕೃಪೆಗಳಾಗಬೇಕು. ಪರಧರ್ಮೀಯರ ಜೊತೆಗೆ ನಡೆದುಕೊಳ್ಳುವಾಗ ಸಹಿಷ್ಣುತೆಯ ಹಾಗೂ ಸರ್ವಧರ್ಮಸಮಭಾವದ ನಿಲುವನ್ನು ನಾವು ಮಣ್ಣಲ್ಲಿ ಹೂತಿಟ್ಟು ಹೋಗಬೇಕು.”

ಇದಕ್ಕಾಗಿ ಕಾಯಿದೆಯನ್ನು ಕೈಯಲ್ಲಿ ತೆಗೆದುಕೊಳ್ಳಬೇಕಾಗಿಬಂದರೂ ಹರಕತ್ತಿಲ್ಲವಂತೆ ! ಇಂಥ ಪ್ರಷೋಭಕ ಬರವಣಿಗೆಯಿಂದ ಹಾಗೂ ಭಾಷಣಗಳಿಂದ ಗಲಭೆಗಳು ಹೊತ್ತಿಕೊಳ್ಳದಿದ್ದರೇನೇ ಆಶ್ಚರ್ಯ.

ಮುಸ್ಲಿಮರನ್ನು ರಾಷ್ಟ್ರದ್ರೋಹಿಗಳೆಂದು ತೋರಿಸುವಾಗ ಭಾರತೀಯ ಇತಿಹಾಸವನ್ನು ಮನಸ್ಸಿಗೆ ಬಂದಂತೆ ಮಣಿಸಲಾಗುತ್ತಿದೆ. ಮುಸ್ಲಿಮರಲ್ಲಿಯ ಕೋಮುವಾದಿ ರಾಜಕೀಯ ಶಕ್ತಿಗಳು ಮುಸ್ಲಿಂ ಸರ್ವಸಾಮಾನ್ಯರನ್ನು ಬಿಟ್ಟು ಸಮಾಜ ಜೀವನದಲ್ಲಿ ಸಮರಸವಾಗುವುದರಿಂದ ತಡೆಗಟ್ಟುತ್ತವೆ, ಖೊಟ್ಟಿ ಧರ್ಮ ದುರಭಿಮಾನ ಪೋಷಿಸುತ್ತವೆ. ಪಾಕಿಸ್ತಾನದಲ್ಲಿಯ ವಾಸ್ತವಸ್ಥಿತಿಗೆ ಅಂಧರಾಗಿ ಆ ದೇಶದ ಗುಣಗಾನ ಮಾಡುತ್ತವೆ. ಇದು ನಿಜವೇ, ಆದರೆ ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಅನೇಕ ಮುಸ್ಲಿಮರು ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯಲ್ಲಿ, ಕಾರ್ಮಿಕರ, ಕೃಷಿ, ಕೂಲಿಕಾರರ, ರೈತರ, ವಿದ್ಯಾರ್ಥಿ, ಯುವಕರ ಚಳುವಳಿಗಳಲ್ಲಿ ಸಹಭಾಗಿಗಳಾಗಿದ್ದರು ಹಾಗೂ ಇಂದೂ ಕೂಡ ಇದ್ದಾರೆ. ಇದೆಲ್ಲವನ್ನೂ ಮುಚ್ಚಿಹಾಕಿ ಬ್ರಿಟೀಶಪೂರ್ವ ಇತಿಹಾಸವನ್ನು ಹಿಂದೂ ವಿರುದ್ಧ ಮುಸ್ಲಿಂ ಎಂತಾಗಿ ವಿಕೃತವಾಗಿ ಇಂದು ಮಂಡಿಸಲಾಗುತ್ತಿದೆ ಹಾಗೂ ಕೋಮುವಾದದ ವಿಷವನ್ನು ಹರಡಿಸಲಾಗುತ್ತಿದೆ.

ಇನ್ನು ಪರಕೀಯ ಹಣದ ಪ್ರಶ್ನೆ. ಹಿಂದುತ್ವವಾದಿಗಳು ಪೆಟ್ರೋ ಡಾಲರಿನ ಬಗ್ಗೆ ಮಾತನಾಡುತ್ತಾರೆ. ಆದರೆ ಅದರ ಹಿಂದಿನ ಸಾಮ್ರಾಜ್ಯವಾದಿ ಶಕ್ತಿಗಳ ಕೈವಾಡದ ಕುರಿತು ತುಟಿ ಬಿಚ್ಚುವುದಿಲ್ಲ. ಇಂದು ಸಾಮ್ರಾಜ್ಯವಾದಿ ಶಕ್ತಿಗಳು ಧರ್ಮಸಂಸ್ಥೆಗಳನ್ನು ಬಳಸಿ ನವಸ್ವತಂತ್ರ ದೇಶಗಳಲ್ಲಿ ಅನೇಕ ಕಾರಸ್ಥಾನಗಳನ್ನು ಹೂಡುತ್ತಿದ್ದಾರೆ. ಇದರಲ್ಲಿ ಹಿಂದುತ್ವವಾದಿಗಳನ್ನೂ ಬಳಸಲಾಗುತ್ತಿದೆ. ಸಾಮ್ರಾಜ್ಯವಾದಿ ಶಕ್ತಿಗಳ ವಿರುದ್ಧ ಏನೂ ಮಾತೆತ್ತದ ಹಿಂದುತ್ವವಾದಿಗಳ 'ರಾಷ್ಟ್ರವಾದ' ನಿಜವಾಗಿಯೂ ಮಹತ್ತರವಾದುದು ! ಈ ಮೊದಲಿಗೂ ಕೂಡ ಸಂಘೀ ಜನರು ಬ್ರಿಟೀಶರ ವಿರುದ್ಧ ಹೋರಾಟದಿಂದ ದೂರ ಸರಿದವರೇ ಆಗಿದ್ದರು ಹಾಗೂ ಮುಸ್ಲಿಂ ವಿರೋಧಿ ಪ್ರಚಾರದಲ್ಲೇ ಮಗ್ನರಾಗಿದ್ದರು. ಆ ವಾರಸುತನದ್ದೇ ಜನಜಾಗರಣವು ಇಂದಿನ ಆವೃತ್ತಿಯಾಗಿದೆ.

ಹಿಂದೂ ಧರ್ಮದಲ್ಲಿಯ ಜಾತಿವಿರೋಧಿ ಹೋರಾಟವನ್ನಾಗಲಿ, ಅಥವಾ ವಿಶೇಷವಾಗಿ ದಲಿತರ ಸಮಾನತೆಯ ಹೋರಾಟವನ್ನಾಗಲಿ ಧರ್ಮನಿರಪೇಕ್ಷತೆ, ಪ್ರಜಾಪ್ರಭುತ್ವ ಹಾಗೂ ಸಮಾಜವಾದಗಳ ತಳಹದಿಯ ಮೇಲೆ ನಡೆಸುವದರಿಂದಲೇ ವಿಪರ್ಯಾಸಗಳನ್ನೂ, ಅನಾಹುತಗಳನ್ನೂ ತಪ್ಪಿಸಬಹುದು. ಫೆಬ್ರವರಿಯಲ್ಲಿ ಮಹಾರಾಷ್ಟ್ರದಲ್ಲಿ ಜರುಗಿದ ಘಟನೆಗಳಿಂದ ಕಂಡುಬಂದದ್ದೇನೆಂದರೆ ಹಿಂದೂ (ಹಾಗೂ ಮುಸ್ಲಿಂ) ಕೋಮುವಾದಿಗಳಿಗೆ ಪೋಷಕವಾದ ಪೂರ್ವಗ್ರಹಗಳು, ತಪ್ಪುತಿಳುವಳಿಕೆಗಳು ಹಾಗೂ ಮನೋವೃತ್ತಿಗಳು ಎರಡೂ ಧರ್ಮಗಳಲ್ಲಿಯ ಸರ್ವಸಾಮಾನ್ಯರಲ್ಲಿ ಆಳವಾಗಿ ನೆಲೆ ಮಾಡಿಕೊಂಡಿವೆ. ಇವುಗಳ ವಿರುದ್ಧ ಪ್ರಚಾರ ನಡೆಸುವದು (ಜನಜಾಗರಣದಷ್ಟೇ ವ್ಯಾಪಕವಾಗಿ, ದೃಢವಾಗಿ) ಪುರೋಗಾಮಿ ಶಕ್ತಿಗಳ ಆದ್ಯಕರ್ತವ್ಯವಾಗಿದೆ. ಇಂಥ ಕಾರ್ಯಕ್ರಮದ ನೇತೃತ್ವವನ್ನು ಎಡಶಕ್ತಿಗಳು ಮಾತ್ರ ವಹಿಸಬಲ್ಲವು ಹಾಗೂ ವಹಿಸಬೇಕಾದರೂ ಕೂಡ, ಕೋಮುವಾದವಿರೋಧಿ ಹೋರಾಟ ಎಡಶಕ್ತಿಗಳಿಗಷ್ಟೇ ಸೀಮಿತವಾಗಿರಲಾರದು. ಇದಕ್ಕಾಗಿ ಎಲ್ಲ ಜಾತಿವಿರೋಧಿ, ಕೋಮುವಾದ ವಿರೋಧಿ ಶಕ್ತಿಗಳನ್ನು ಒತ್ತಟ್ಟಿಗೆ ತರಬೇಕಾಗುವದು, ಸಕ್ರಿಯಗೊಳಿಸಬೇಕಾಗುವದು.

ಭಾರತೀಯ ಸಮಾಜೇತಿಹಾಸದಲ್ಲಿಯ ಎಲ್ಲ ಜಾತಿವಿರೋಧಿ, ಕೋಮುವಾದ ವಿರೋಧಿ ಹಾಗೂ ಸರ್ವಧರ್ಮ ಸಮಭಾವದ ಪ್ರವಾಹಗಳನ್ನು (ಅವುಗಳ ಐತಿಹಾಸಿಕ ಇತಿಮಿತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡೇ) ನಾವು ಶ್ರಮಿಕ ವರ್ಗದ ಹಾಗೂ ಒಟ್ಟು ಜನತೆಯಲ್ಲಿಯ ಪ್ರಜಾಪ್ರಭುತ್ವವಾದಿ ಐಕ್ಯತೆಯನ್ನು ರಕ್ಷಿಸುವದಕ್ಕಾಗಿ, ಬೆಳಸಿ ಗಟ್ಟಿಗೊಳಿಸುವದಕ್ಕಾಗಿ ಉಪಯೋಗಿಸಿಕೊಳ್ಳಬೇಕು.

ಸಿಂಧನೂರು :

ಕುಡಿಯುವ ನೀರಿಗೆ ಒತ್ತಾಯಿಸಿ ಘೆರಾವೋ

6-3-82ರಂದು ಸಿಂಧನೂರಿನಲ್ಲಿ 'ಪ್ರಜಾಸತ್ತಾತ್ಮಕ ಯುವಜನ ಸಂಘಟನೆ', 'ವಿಕಾಸ ಯುವಕ ಮಂಡಳಿ', 'ನವೋದಯ ಯುವಕ ಮಂಡಳಿ' ಮೊದಲಾದ ಯುವಜನ ಸಂಘಟನೆಗಳು ಜಂಟಿಯಾಗಿ, ಕುಡಿಯುವ ನೀರು ಮತ್ತು ಪುರಸಭೆಯ ಇನ್ನಿತರ ಅವ್ಯವಸ್ಥೆ ಸರಿಪಡಿಸಬೇಕೆಂದು ಒತ್ತಾಯಿಸಿ ಮತಪ್ರದರ್ಶನವನ್ನು ಸಂಘಟಿಸಿದ್ದವು.

ಈ ತೊಂದರೆಗಳಿಗೆ ಕಿವಿಗೊಡದೇ ಬೋಗಸ್ ಆಶ್ವಾಸನೆ ಕೊಡುತ್ತಿರುವ ಪುರಸಭೆ ಆಡಳಿತಾಧಿಕಾರಿ, ತಹಸೀಲ್ದಾರ್ ಮತ್ತು ಸ್ಥಳೀಯ ಶಾಸಕರನ್ನು ಘೆರಾವೋ ಮಾಡಲಾಯಿತು.

ಬಸ್‌ನಿಲ್ದಾಣದಿಂದ ಮಹಿಳೆಯರೂ ಸೇರಿದಂತೆ ಸುಮಾರು 300 ಜನ ನಗರದ ಮುಖ್ಯ ರಸ್ತೆಗಳಲ್ಲಿ 'ಕುಡಿಯುವ ನೀರು ಕೊಡಿ', 'ಮೂತ್ರಾಲಯಗಳನ್ನು ನಿರ್ಮಿಸಿ' ಎಂಬಿತ್ಯಾದಿ ಘೋಷಣೆಗಳೊಂದಿಗೆ ಮೆರವಣಿಗೆ ಹೊರಡಿಸಲಾಗಿತ್ತು.

ನಂತರ ಪುರಸಭಾ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಸ್ಥಳಕ್ಕೆ ಆಗಮಿಸಿದ ತಹಸಿಲ್ದಾರರಿಂದ, ಶಾಸಕರಿಂದ ತೃಪ್ತಿಕರ ವಾಗ್ದಾನ ದೊರೆಯದ್ದರಿಂದ ಅವರುಗಳನ್ನು ಘೆರಾವೋ ಮಾಡಲಾಯಿತು.

ಕೊನೆಯಲ್ಲಿ ಉದ್ರಿಕ್ತ ಮತಪ್ರದರ್ಶಕರನ್ನು ಸಮಾಧಾನಪಡಿಸಿ ಸಂಬಂಧಪಟ್ಟ ಅಧಿಕಾರಿಗಳು ಬೇಡಿಕೆಗಳನ್ನು ಶೀಘ್ರ ಈಡೇರಿಸುವುದಾಗಿ ಭರವಸೆ ನೀಡಿದರು.

ಪ್ರಾದೇಶಿಕ ಸಮಿತಿ

28-2-82 ರಂದು ದ.ಕ. ಜಿಲ್ಲೆಯ ಉಳ್ಳಾಲ ಒಂಬತ್ತು ಕೆರೆ ಸುಂದರಿಭಾಗ್ ಪ್ರದೇಶದ ಬೀಡಿ ಕಾರ್ಮಿಕರ ಮಹಾಸಭೆ ನಡೆಯಿತು. (ವರದಿ 14-3-82ರ ಐಕ್ಯರಂಗದಲ್ಲಿ ಪ್ರಕಟವಾಗಿದೆ.)

ನೂತನ ಸಾಲಿಗೆ ಈ ಕೆಳಕಂಡವರನ್ನೊಳಗೊಂಡ ಪ್ರಾದೇಶಿಕ ಸಮಿತಿಯನ್ನು ರಚಿಸಲಾಯಿತು.

ಅಧ್ಯಕ್ಷರಾಗಿ ಕೆ. ಪ್ರಭಾಕರ, ಉಪಾಧ್ಯಕ್ಷರುಗಳಾಗಿ ಕ್ರಿಸ್ಟೋಫರ ಡಿಸೋಜ್, ಕಮಲಾಕ್ಷಿ, ಕಾರ್ಯದರ್ಶಿಯಾಗಿ ಬಿ. ಭಾಸ್ಕರ ಕುಲಾಲ್, ಸಹಕಾರ್ಯದರ್ಶಿಗಳಾಗಿ ಯು. ಈಶ್ವರ ಮತ್ತು ಯು. ಜಾನಕಿ ಯವರನ್ನೊಳಗೊಂಡ 19 ಸದಸ್ಯರ ಪ್ರಾದೇಶಿಕ ಸಮಿತಿಯನ್ನು ಚುನಾಯಿಸಲಾಯಿತು.

ಶಾಂತಿ ಮತ್ತು ಸೌಹಾರ್ದತೆಗೆ

ಮಹಿಳಾ ದಿನದಂದು ಪಣ

ಬದುಕಿನ ವಿವಿಧ ಸ್ತರಗಳಲ್ಲಿ ಮಹಿಳೆಯನ್ನು ಬಿಂಬಿಸುವ, ಯುದ್ಧ ದುರಂತ ಮತ್ತು ಸಮರದಲ್ಲಿ ಮಹಿಳೆಯ ಸಂಬಂಧ ಕುರಿತ ವಸ್ತುಪ್ರದರ್ಶನ ಹಾಗೂ ಖ್ಯಾತ ಸಾಹಿತಿ ಡಾ। ಅನುಪಮಾ ನಿರಂಜನ ಅವರು ಮುಖ್ಯ ಅತಿಥಿಯಾಗಿದ್ದ ಸಮಾರಂಭದ ಮೂಲಕ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಬೆಂಗಳೂರು ಘಟಕವು ಮಾರ್ಚ್ 8 ರಂದು ಅಂತರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಿತು.

ಅಮೆರಿಕದ ಸಾಮ್ರಾಜ್ಯವಾದದ ಶಸ್ತ್ರದಾಹಕ್ಕೆ ಸಿಲುಕಿ ಇಡೀ ವಿಶ್ವವೇ ಸಮರದ ವಾತಾವರಣದಲ್ಲಿ ತತ್ತರಿಸುತ್ತಿದೆ. ಅದರ ಅಣ್ವಸ್ತ್ರ ಸ್ಪರ್ಧೆ, ಅನೇಕ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರ ಸರಬರಾಜು, ಸಮರದ ಕುತಂತ್ರಗಳಿಂದ ಜಗತ್ತು ಯುದ್ಧ ವಾತಾವರಣದಲ್ಲಿ ಸಿಲುಕಿದೆ. ಅಮೇರಿಕದ ಈ ಸಾಮ್ರಾಜ್ಯವಾದದ ವಿರುದ್ಧ ಧ್ವನಿ ಎತ್ತಬೇಕಾಗಿದೆ. ಮಾನವಕೋಟಿಯ ಉಳಿವಿಗೆ, ಮನುಕುಲದ ಶಾಂತಿಗೆ, ನಿಶ್ಶಸ್ತ್ರೀಕರಣಕ್ಕೆ ಹೋರಾಟ ನಡೆಸಬೇಕಾಗಿದೆ. ಈ ಹಿನ್ನೆಲೆಯಲ್ಲಿ 1981ರ ಅಕ್ಟೋಬರ್‌ನಲ್ಲಿ ಪ್ರೇಗ್‌ನಲ್ಲಿ ನಡೆದ ವಿಶ್ವ ಮಹಿಳಾ ಕಾಂಗ್ರೆಸ್ 1982 ರ ಅಂತರರಾಷ್ಟ್ರೀಯ ಮಹಿಳಾ ದಿನವನ್ನು (ಮಾರ್ಚ್ 8), ಶಾಂತಿ ಮತ್ತು ಸೌಹಾರ್ದತೆ'ಯ ದಿನವನ್ನಾಗಿ ಆಚರಿಸಲು ಕರೆ ನೀಡಿತ್ತು. ಆದುದರಿಂದಲೇ ಈ ವರ್ಷದ ಮಹಿಳಾ ದಿನದಂದು ಯುದ್ಧ ವಿರೋಧಿ ಶಾಂತಿ ಪರ ಘೋಷಣೆಗೆ ಒತ್ತುಕೊಡಲಾಗಿತ್ತು.

ಸಮಾಜವಾದಿ ರಾಷ್ಟ್ರಗಳಲ್ಲಿನ ಮಹಿಳೆಯರ ಸ್ಥಾನಮಾನ ಕುರಿತು ಮಾತನಾಡಿದ ಡಾ। ಅನುಪಮಾ ನಿರಂಜನ ಅವರು, ಸಮಾಜವಾದಿ ವ್ಯವಸ್ಥೆ ಇದ್ದಾಗ ಮಾತ್ರ ಸಮಾನತೆ ಬರುತ್ತದೆ ಎಂದರು.

ಮಹಿಳೆಯರು ಆರ್ಥಿಕವಾಗಿ ಸ್ವತಂತ್ರವಾದಾಗ ಮಾತ್ರ ಸಮಾನತೆ ದೊರೆಯುವುದು ಸಾಧ್ಯವೆಂದ ಅವರು, ಥಳುಕಿನಿಂದ ಬಳಕುವ ರೋಟರಿ ಲಯನ್ಸ್‌ನಂಥ ಮಹಿಳಾ ಸಂಘಟನೆಗಳು ಬೇಡವೆಂದರು.

ಅಧ್ಯಕ್ಷತೆ ವಹಿಸಿದ್ದ ಎನ್. ಗಾಯತ್ರಿ ಅವರು ಜಗತ್ತು ಇಂದು ಸಮರದ ಭೀತಿಯಿಂದ ತತ್ತರಿಸುತ್ತಿದೆಯೆಂದು ತಿಳಿಸಿ, ವಿಶ್ವ ಶಾಂತಿಗೆ ಮಹಿಳೆಯರು ಹೋರಾಟ ನಡೆಸಬೇಕಾದ ಅಗತ್ಯವನ್ನು ಒತ್ತಿ ಹೇಳಿದರು.

ಸಂಘಟನೆಯ ಸದಸ್ಯೆಯರಿಂದ ಕ್ರಾಂತಿ ಗೀತೆಗಳು, ಅಣ್ಣಮ್ಮ ಅವರಿಂದ ಸ್ವಾಗತ ಮತ್ತು ವಿಮಲಾ ಅವರಿಂದ ವಂದನಾರ್ಪಣೆ ಆಯಿತು.

ಭಾರತ-ಜರ್ಮನಿ ಮೈತ್ರಿ ಸಂಘದ ಕಾರ್ಯದರ್ಶಿ ಶ್ರೀರಾಮನಾಥನ್ ಅವರು ಸಂಘಟನೆಗೆ ಕೆಲವು ಪುಸ್ತಕಗಳನ್ನು ಕಾಣಿಕೆಯಾಗಿತ್ತರು.

ಪ್ರಾಂತ ರೈತ ಸಂಘದ ೭ ನೇ ಸಮ್ಮೇಳನ

(1ನೇ ಪುಟದಿಂದ)

ಸಿಡಿ ಕೊಟ್ಟಿದ್ದೇವೆ. ಪುಕ್ಕಟೆಯಾಗಿ ವಿದ್ಯುಚ್ಛಕ್ತಿ ಒದಗಿಸಿದ್ದೆವು. ರೂ. 135-140ರಷ್ಟು ಭತ್ತದ ಬೆಲೆ ಏರಿಸಿದ್ದೆವು.

ತಿಂಗಳಿಗೆ ರೂ. 45 ರಂತೆ 2,90,000 ಕೃಷಿ ಕೂಲಿಕಾರರಿಗೆ ಪ್ರತಿ ವರ್ಷ ರೂ. 30 ಕೋಟಿಯಷ್ಟು ಪೆನ್‌ಶನ್ ಕೊಟ್ಟೆವು. (ತ್ರಿಪುರ, ಪ. ಬಂಗಾಲ ಸರ್ಕಾರಗಳೂ ಇಂಥ ಪೆನ್‌ಶನ್ ಕೊಡುತ್ತಿವೆ).

ಕರ್ನಾಟಕದಲ್ಲಿ ರೂ. 5-25 ಹೆಂಗಸರಿಗೆ, ರೂ. 7 ಗಂಡಸರಿಗೆ (ಕೆಲವು ಕಡೆ ಬರೀ ರೂ. 3) ಕನಿಷ್ಟ ಕೂಲಿ ಸಿಗುತ್ತಿರುವಾಗ, ಕೇರಳದಲ್ಲಿ ಮಹಿಳೆಯರಿಗೆ 7, ಗಂಡಸರಿಗೆ ರೂ. 12-15 ರಷ್ಟು ಕನಿಷ್ಟ ವೇತನ ಕೊಟ್ಟಿದ್ದೇವೆ. ತಿಂಗಳಿಗೆ ರೂ. 50ರಂತೆ ನಿರುದ್ಯೋಗ ಭತ್ತೆ ಕೊಟ್ಟಿದ್ದೇವೆ. ಇವರ ಒಟ್ಟು ವಾರ್ಷಿಕ ಖರ್ಚು ರೂ. 40 ಕೋಟಿ. ಇದಕ್ಕೆ ರೂ. 150 ಕೋಟಿ ಧನ ಸಹಾಯ ಮಾಡಿರೆಂದು ಕೇಂದ್ರ ಸರಕಾರವನ್ನು ಕೇಳಿದೆವು. ಕೇಂದ್ರ ಸರಕಾರ ಸಹಾಯ ಮಾಡಲಿಲ್ಲ. ಆದರೆ ಟಾಟಾ, ಬಿರ್ಲಾ ಅಂತವರಿಗೆ ರೂ. 2500 ಕೋಟಿ ಸಹಾಯ ಮಾಡಿದೆ. ಯಾಕೆ ಗೊತ್ತೆ ? ನಮ್ಮ ದೇಶದಲ್ಲಿ ಬೆಳೆಯುವ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ವಿದೇಶಿ ಗುತ್ತೇದಾರರಿಗೆಮಾರಾಟ ಮಾಡುವ ಸಲುವಾಗಿ.

ರಾಷ್ಟ್ರೀಯ ಭದ್ರತಾ ಕಾನೂನನ್ನು, ಅತ್ಯಾವಶ್ಯಕ ಸೇವೆ ಕಾಯಿದೆಯನ್ನೂ ನಾವು ಕೇರಳದಲ್ಲಿ ಉಪಯೋಗಿಸಿಲ್ಲ. ಈ ರೀತಿ ರೈತ, ಕಾರ್ಮಿಕ, ನಿರುದ್ಯೋಗಿಗಳಿಗೆ ಸಹಾಯ ಮಾಡುವ ನಮ್ಮ ಸರಕಾರವನ್ನು ಇಂದಿರಾ ಗಾಂಧಿ ಉರುಳಿಸಿ ಬಹುಮತವಿಲ್ಲದ ತನ್ನ ಪಕ್ಷದ ಸರಕಾರ ಸ್ಥಾಪಿಸಿದ್ದಾರೆ" ಎಂದು ಕೇರಳದ ಮಾಜಿ ಮುಖ್ಯ ಮಂತ್ರಿ ಕಾಂ| ಇ. ಕೆ. ನಾಯನಾರ್ ಅವರು ಕರ್ನಾಟಕ ಪ್ರಾಂತ ರೈತ ಸಂಘದ 7ನೇ ಸಮ್ಮೇಳನದ ಅಂಗವಾಗಿ ಏರ್ಪಡಿಸಲ್ಪಟ್ಟ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತಾಡುತ್ತ ಕೇರಳದ ಎಡ ಮತ್ತು ಪ್ರಜಾಪ್ರಭುತ್ವ ರಂಗದ ಸಾಧನೆಗಳನ್ನು ವಿವರಿಸಿದರು.

ಈಗ ಅಧಿಕಾರದಲ್ಲಿರುವ ಇಂದಿರಾ ಪಕ್ಷದ ಕರುಣಾಕರನ್ ಸರಕಾರ ಕೃಷಿ ಕಾರ್ಮಿಕರ, ರೈತರ ಪೆನ್‌ಶನ್ ರದ್ದು ಮಾಡಿದೆ. ಸಬ್‌ಸಿಡಿ ನಿಲ್ಲಿಸಿದೆ. ರೈತರಿಗೆ, ಕೃಷಿ ಕಾರ್ಮಿಕರಿಗೆ ಕೊಡುತ್ತಿರುವ ಕೋಟ್ಯಾವಧಿ ರೂಪಾಯಿ ಉತ್ಪಾದನೆಗೆ ಸಹಾಯವಾಗುತ್ತಿಲ್ಲೆಂದು ಹೇಳಿ ಇಂದಿರಾ ಕಾಂಗ್ರೆಸ್ಸಿನ ಕರುಣಾಕರನ್ ಸರಕಾರ ಅದನ್ನೆಲ್ಲ ನಿಲ್ಲಿಸಿಬಿಟ್ಟಿದೆ. ಇಂಥ ಜನವಿರೋಧಿ ನೀತಿಯ ವಿರುದ್ಧ ನಾವು ಹೋರಾಟ ನಡೆಸಿದ್ದೇವೆ ಎಂದು ಕಾಂ| ನಾಯನಾರ್ ಹೇಳಿ, ಇಂದಿರಾ ಸರಕಾರವಿದ್ದಲ್ಲೆಲ್ಲ ಮತೀಯ ದಂಗೆಗಳು ನಡೆಯುತ್ತಿವೆಯೆಂದೂ ಆದರೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದ ಎಡರಂಗ, ಎಡ ಪ್ರಜಾಪ್ರಭುತ್ವರಂಗ ಸರ್ಕಾರಗಳಿರುವಲ್ಲಿ ಅಂಥ ದಂಗೆಗಳು ನಡೆಯುತ್ತಿಲ್ಲೆಂದು ಹೇಳಿ, ಇಂದಿರಾ ಆಳ್ವಿಕೆಯಲ್ಲಿ ಜಾತ್ಯಾತೀತತೆ ಎಂಬುದು ಉಳಿದಿಲ್ಲೆಂದೂ, ಇಂಥ ನೀತಿಯ ವಿರುದ್ಧ ಜನರನ್ನು ಒಂದುಗೂಡಿಸಬೇಕೆಂದೂ ಹೇಳಿ, ಕೇರಳದಲ್ಲಿ ಚುನಾವಣೆಯಾದರೆ ತಾವು ವಿಜಯಗಳಿಸುವ ಆತ್ಮವಿಶ್ವಾಸ ವ್ಯಕ್ತಮಾಡಿ, ಕರ್ನಾಟಕದಲ್ಲಿ ರೈತ ಚಳುವಳಿ ಬಲಿಷ್ಠವಾಗಿ ಬೆಳೆಯಲೆಂದು ಹಾರೈಸಿದರು.

ಕರ್ನಾಟಕದಲ್ಲಿ ಇಂದಿರಾ ಬೇಟೆಗೆ ಅವಕಾಶ ಕೊಡಬೇಡಿ

—ಕಾಂ| ಶಂಕ್ರಯ್ಯ

"ತನ್ನ ಏಕಸ್ವಾಮ್ಯ ಸರ್ವಾಧಿಕಾರ ಸ್ಥಾಪಿಸುವ ದುರುದ್ದೇಶದಿಂದ ಅದನ್ನು ಭದ್ರಗೊಳಿಸುವ ಸಲುವಾಗಿ, ಇಂದಿರಾ ಗಾಂಧಿ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಸಾಲ ಪಡೆದಿದ್ದಾರೆ. ಅದಕ್ಕಾಗಿ ನಮ್ಮ ದೇಶದ ಸಾರ್ವಭೌಮತ್ವವನ್ನೂ ಸ್ವಾತಂತ್ರ್ಯವನ್ನೂ ಅಡವು ಇಟ್ಟಿದ್ದಾರೆ. ಈ ಸಾಲ ಪಡೆಯುವುದರ ಸಲುವಾಗಿಯೇ; ರೈತರಿಂದ ಕೊಳ್ಳುವ ದವಸ ಧಾನ್ಯಗಳ ಬೆಲೆ ಇಳಿಸಲಾಯಿತು. ಸಬ್‌ಸಿಡಿ ಬಂದು ಮಾಡಲಾಯಿತು. (ಇನ್ನು ಮುಂದೆ ಅಗ್ಗದರದ ಅಂಗಡಿಗಳಲ್ಲಿ ಕಡಿಮೆ ಬೆಲೆಯಲ್ಲಿ ಧಾನ್ಯ ದೊರೆಯದು) ರೇಲ್ವೆ ಸಾಗಾಣಿಕೆ ದರ, ರೇಲ್ವೆ ಪ್ರಯಾಣ ದುಬಾರಿ ಮಾಡಲಾಯಿತು. ಟಪಾಲು ದರ ಜಾಸ್ತಿಯಾಯಿತು, ರಾಷ್ಟ್ರೀಯ ಸಂರಕ್ಷಣ ಕಾನೂನು ಮತ್ತು ಅತ್ಯಾವಶ್ಯಕ ಸೇವೆ ಪ್ರತಿಬಂಧಕಾಜ್ಞೆಗಳನ್ನು ರೈತ ಕಾರ್ಮಿಕರ ಹೋರಾಟ ಹತ್ತಿಕ್ಕಲು ಉಪಯೋಗಿಸಲಾಗುತ್ತಿದೆ. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ, ಕೈಗಾರಿಕೆಗಳ ಅಭಿವೃದ್ಧಿಗಾಗಿ ನಾವು ಹೋರಾಡಿದ್ದೆವು. ಈಗದನ್ನು ಇಂದಿರಾ ಗಾಂಧಿ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗೆ ಮಾರಾಟ ಮಾಡುತ್ತಿದ್ದಾರೆ. ಇದರ ವಿರುದ್ಧ ನಾವು ಹೋರಾಡಬೇಕು.

ರಾಜ್ಯ ಸರ್ಕಾರಗಳು ರೈತ ಬೆಳೆದ ಬೆಳೆಗಳಿಗೆ ಹೆಚ್ಚು ಬೆಲೆ ಕೊಡಬೇಕೆಂದು ನಿರ್ಣಯಿಸಿದರೂ ಕೂಡ ಇಂದಿರಾ ಅದಕ್ಕೆ ಒಪ್ಪುತ್ತಿಲ್ಲ. ಈಗ 20 ಅಂಶದ ಕಾರ್ಯಕ್ರಮ ಪ್ರಚಾರ ಮಾಡುತ್ತಾರೆ. ಕರ್ನಾಟಕದ ರೈತರು ಇದರ ಕುರಿತು ಏನು ವಿಚಾರ ಮಾಡುತ್ತಾರೆಂದು ನನಗೆ ಗೊತ್ತು. 34 ವರ್ಷಗಳಲ್ಲಿ ಭೂಸುಧಾರಣೆ ಮಾಡದ ಕಾಂಗ್ರೆಸ್ ಸರ್ಕಾರ ಈಗ ಅದರ ಪ್ರಚಾರ ಮಾಡುತ್ತಿದೆ. ಭೂನ್ಯಾಯ ಮಂಡಲಿ, ಭೂಸುಧಾರಣ ಕಾಯಿದೆಗಳಿಂದ ಕರ್ನಾಟಕದಲ್ಲಿ ಎಷ್ಟು ಜನರಿಗೆ ಲಾಭವಾಗಿದೆ. ರೈತ, ಕೃಷಿ ಕಾರ್ಮಿಕರ, ಹರಿಜನರ ಸಮಸ್ಯೆಗಳೆಲ್ಲ ಬಗೆಹರಿಯಬೇಕಾದರೆ ವಿಶಾಲವಾದ ಐಕ್ಯ ಹೋರಾಟ ನಡೆಸಬೇಕು. ಕರ್ನಾಟಕ ಇಂದಿರಾ ಗಾಂಧಿಯ ಬೇಟೆಯ ಬಯಲಾಗಬಾರದೆಂದು ಅಖಿಲಭಾರತ ಕಿಸಾನ ಸಭೆಯ ಉಪಾಧ್ಯಕ್ಷರೂ, ತಮಿಳುನಾಡಿನ ವಿಧಾನಸಭೆ ಸದಸ್ಯರಾದ ಕಾಂ| ಶಂಕ್ರಯ್ಯನವರು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಹೇಳಿದರು.

ಅವಿರತವಾಗಿ ನಡೆಯುತ್ತಿರುವ ರೈತರ ಸುಲಿಗೆ ನಿಲ್ಲಲಿ

—ಚಾತುನ್ನಿಮಾಸ್ಟರ್

"ಅವಿರತವಾಗಿ ನಡೆಯುತ್ತಿರುವ ನಮ್ಮ ದೇಶದ ರೈತರ ಸುಲಿಗೆ ನಿಲ್ಲಲೇಬೇಕು. ರೈತರಲ್ಲಿ ಪ್ರಕ್ಷೋಭೆ ಉಂಟಾಗಿದೆ. ದಂಗೆ ಎದ್ದು ಕ್ರಾಂತಿಯತ್ತ ಮುನ್ನುಗ್ಗುತ್ತಿದ್ದಾನೆ. ರಾಜಕೀಯ ಭಿನ್ನಾಭಿಪ್ರಾಯವಿಲ್ಲದೆ, ವಿಶಾಲವಾದ ಸಂಯುಕ್ತ ಹೋರಾಟ ನಡೆಸಲು ಎಲ್ಲರೂ ಮುಂದೆ ಬನ್ನಿ" ಎಂದು ಕರೆಕೊಟ್ಟವರು ಅಖಿಲಭಾರತ ಕಿಸಾನ ಸಭೆಯ ಪ್ರ. ಕಾರ್ಯದರ್ಶಿಯವರಾದ ಕಾಂ| ಚಾತುನ್ನಿಮಾಸ್ಟರು. ಸಂದರ್ಭ, ಮುಳಬಾಗಲಿನಲ್ಲಿ ನೆರೆದ ಸಾರ್ವಜನಿಕ ಸಭೆ.

"ನಮ್ಮ ದೇಶದ ಸ್ವಾತಂತ್ರ್ಯದ ಸಲುವಾಗಿ ಪಣತೊಟ್ಟು ಹೋರಾಡುತ್ತಿದ್ದ, ನೆಹರೂ, ನಂಬೂದರಿಪಾಡ್‌ರಂಥವರು 1936ರಲ್ಲಿ ಲಕ್ನೋ ನಗರದಲ್ಲಿ ಅಖಿಲ ಭಾರತ ಕಿಸಾನಸಭೆ ರಚಿಸಿದ್ದರು. ಕಳೆದ 46 ವರ್ಷಗಳಲ್ಲಿ ಅದು ರೈತರ, ಕೃಷಿ ಕಾರ್ಮಿಕರ ಬೇಡಿಕೆಗಳ ಸಲುವಾಗಿಯೂ, ಭೂಮಾಲಕರ ಮತ್ತು ಗುತ್ತೆದಾರಿ ಬಂಡವಾಳದಾರರ ವಿರುದ್ಧವೂ ಹಲವಾರು ಹೋರಾಟಗಳನ್ನು ನಡೆಸಿದೆ. ಬ್ರಿಟೀಷರ ವಿರುದ್ಧ ಹೋರಾಟದಲ್ಲಿ ಕಯ್ಯೂರು ಚಳುವಳಿಯಲ್ಲಿ ರೈತರನ್ನು ಗಲ್ಲಿಗೇರಿಸಲಾಯಿತು. ಬಂಗಾಳದ ತೇಭಾಗ, ತೆಲಂಗಾಣದ ಸಶಸ್ತ್ರಕ್ರಾಂತಿ, ಮಹಾರಾಷ್ಟ್ರದಲ್ಲಿ ವಾರ್ಲಿ ಜನರ ಹೋರಾಟ–ಹೀಗೆ ಸಾವಿರಾರು ಧೀರ ಹೋರಾಟಗಳನ್ನು ಕಿಸಾನ ಸಭಾ ನಡೆಸಿ, ಅದೇ ಪರಂಪರೆಯನ್ನು ಈಗಲೂ ಮುಂದುವರಿಸುತ್ತಿರುವುದರಿಂದ ಅದರಲ್ಲೀಗ 70 ಲಕ್ಷ ರೈತರು ಸದಸ್ಯರಾಗಿದ್ದಾರೆ''.

''ಹೆಚ್ಚು ಉತ್ಪನ್ನ ಮಾಡಿರೆಂದು ನೆಹರೂ-ಇಂದಿರಾಗಾಂಧಿ ಹೇಳಿದ್ದಾರೆ. ಆಹ್ವಾನವನ್ನು ಸ್ವೀಕಾರಮಾಡಿ ರೈತ ಹೆಚ್ಚು ಉತ್ಪಾದಿಸಿದ. ಆದರೆ ಅವನ ಬೆಳೆಗೆ ಬೆಲೆ ಸಿಗಲಿಲ್ಲ. ಒಕ್ಕಲುತನ ನಾಶವಾಗುತ್ತಿದೆ''.

''ಪಂಜಾಬ, ಹರಿಯಾಣ, ಉತ್ತರ ಪ್ರದೇಶದ ರೈತರು ಕ್ವಿಂಟಲ್ಲಿಗೆ ರೂ.130 ಬೇಡಿದ್ದರು ಸರಕಾರ ಅವರಿಗೆ ರೂ. 120 ಕ್ಕಿಂತ ಹೆಚ್ಚು ಕೊಡಲಿಲ್ಲ ಆದರೆ ಕ್ವಿಂಟಲ್ಲಿಗೆ ರೂ. 196-40 ಕೊಟ್ಟು ಅಮೇರಿಕದಿಂದ ಗೋದಿ ಆಮದು ಮಾಡಿತು. ಈಗ ಮತ್ತೆ ಆಸ್ಟ್ರೇಲಿಯದಿಂದ 7 ಲಕ್ಷ ಕ್ವಿಂಟಲ್ ತರಿಸಿದ್ದಾರೆ. ನಮ್ಮ ದೇಶದಲ್ಲಿ ಸಾಕಷ್ಟು ಧಾನ್ಯ ಬೆಳೆದಿರುವಾಗ ವಿದೇಶಗಳಿಂದ ಗೋದಿ ತರಿಸುವ ಅಗತ್ಯವೇನಿದೆ ?''

''65 ಲಕ್ಷ ಟನ್ ಸಕ್ಕರೆ ನಮ್ಮಲ್ಲಿ ಉತ್ಪಾದನೆಯಾಗುತ್ತಿದೆಯೆಂದೂ ಅಂತರಿಕ ವಿತರಣೆಗೆ ಬೇಕಾಗಿರುವುದು ಬರೀ 55 ಲಕ್ಷ ಟನ್ ಮಾತ್ರವೆಂದೂ ಕೇಂದ್ರ ಮಂತ್ರಿಗಳು ಹೇಳಿದ್ದಾರೆ. ನಮ್ಮ ದೇಶದ ಉತ್ಪಾದನೆಯಲ್ಲಿ 10 ಲಕ್ಷ ಟನ್ ಸಕ್ಕರೆ ಉಳಿತಾಯವಾಗುತ್ತಿರುವಾಗ ವಿದೇಶದಿಂದ ಸಕ್ಕರೆ ತರಿಸುವ ನೀತಿ ಖಂಡನೀಯ''.

'ಕೇರಳದ ರೈತರಿಗೆ ಅಪಾರವಾಗಿ ಬೆಳೆಸುತ್ತಿರುವ ಕೊಬ್ಬರಿಗೆ ಸರಿಯಾದ ಬೆಲೆ ನಿಗದಿ ಮಾಡದೆ, ವಿದೇಶದಿಂದ ಕೇಂದ್ರ ಸರಕಾರ 80,000 ಟನ್ ಕೊಬರಿ ಎಣ್ಣೆ ತರಿಸಿದೆ. ಇದರಿಂದಾಗಿ ಕೇರಳದ ರೈತರಿಗೆ ರೂ.400 ಕೋಟಿ ಹಾನಿಯಾಗಿದೆ'.

''ಕರ್ನಾಟಕದ ಮಲಪ್ರಭಾ ಪ್ರದೇಶದ ರೈತರ ಹೋರಾಟ ದೇಶದ ರೈತರ ಹೋರಾಟಕ್ಕೆ ನಾಂದಿಯಾಗಿದೆ. ನಿಮ್ಮ ಹೋರಾಟದ ಪ್ರತಿಫಲವಾಗಿ ಗುಂಡೂರಾವ್ ಸರಕಾರ ರೂ. 80 ಕೋಟಿ ಪರಿಹಾರ ಕೊಡುವುದಾಗಿ ಪ್ರಕಟಿಸಿದೆ. ಆದರೆ ಅದು ಇನ್ನೂ ರೈತರ ಕೈ ಸೇರಿಲ್ಲ.

ಕಾಂಗ್ರೆಸ್ಗೆ ಮತ ನೀಡುವ ರೈತರನ್ನು ಕೇಳಿದರೂ ಸರಿಯಾದ ಬೆಲೆ ಸಿಗುತ್ತಿಲ್ಲೆಂದೂ, ಪರಿಹಾರ ಸೊನ್ನೆ ಎಂದೂ ಹೇಳುತ್ತಾನೆ. ಆದಕಾರಣ ಯಾವ ರಾಜಕೀಯ ಬಂಧನ ವಿಲ್ಲದೆ, ರೈತರೆಲ್ಲ ಒಂದಾಗಿ ತಮ್ಮ ಸಮಸ್ಯೆಗಳ ಪರಿಹಾರ ಪಡೆಯಲು ವಿಶಾಲ ತಳಹದಿಯ ಹೋರಾಟ ನಡೆಸುವುದು ಅಗತ್ಯ. ಆ ದಿಸೆಯಲ್ಲಿ ನೀವು ಕಾರ್ಯ ಮುಂದುವರೆಸಿರೆಂದು'' ಕಾ. ಚಾತುನ್ನಿ ಮಾಸ್ಟರ್ ಕರೆಯಿತ್ತರು.

ಅನಂತರ ಬಿಜಾಪುರದ ಭೀಮಸಿ ಕಲಾದಗಿ, ಕೋಲಾರದ ವೆಂಕಟಗಿರಿಯಪ್ಪನವರೂ ಭಾಷಣ ಮಾಡಿದರು.

ಕೋಲಾರ ಜಿಲ್ಲೆಯ ನಾನಾ ಭಾಗಗಳಿಂದ ಬಂದ ಸಾವಿರಾರು ರೈತರ, ಬೆಂಗಳೂರು, ಕೆ.ಜಿ.ಎಫ್ ನಿಂದ ಬಂದ ಕಾರ್ಮಿಕರ ಬೃಹತ್ ಮೆರವಣಿಗೆ ಮಧ್ಯಾಹ್ನ ಒಂದುವರೆ ಗಂಟೆಗೆ ಪ್ರಾರಂಭವಾಗಿ ಜಯಘೋಷಗಳೊಡನೆ ಊರಲ್ಲಿ ಸುತ್ತಾಡಿ ನಾಲ್ಕು ಗಂಟೆಗೆ ಹೈಸ್ಕೂಲ್ ಮೈದಾನದಲ್ಲಿ ಸಾರ್ವಜನಿಕ ಸಭೆಯಲ್ಲಿ ಲೀನಗೊಂಡಿತು. ಕೆ. ಜಿ. ಎಫ್. ಗಣಿ ಕಾರ್ಮಿಕರು ಕೆಂಪು ವಸ್ತ್ರಧಾರಿ ಬ್ಯಾಂಡ್ ಮೇಳ, ಅದರಂತೆಯೇ ಇತರೆಡೆಗಳಿಂದ ಬಂದ ಡೊಳ್ಳು ವಾಲಗ, ಹಲಿಗೆ ಮೇಳಗಳು ಮೆರವಣಿಗೆಗೆ ಹೆಚ್ಚಿನ ಆಕರ್ಷಣೆ ನೀಡಿದವು. ತಮ್ಮ ಪ್ರದೇಶದಲ್ಲಿ ಮೆರವಣಿಗೆ ಹೋಗುತ್ತಿದ್ದಾಗ, ಬೀಡಿ ಕೆಲಸಗಾರರು ಮೆರವಣಿಗೆಗಾರರ ಮೇಲೆ ಹೂವಿನ ಮಳೆಗೈದರು.

ನ್ಯಾಯವಾದಿ ಕಾ| ವೆಂಕಟರಾಮಯ್ಯನವರು ಸಾರ್ವಜನಿಕ ಸಭೆಯ ಅಧ್ಯಕ್ಷತೆ ವಹಿಸಿದ್ದರು. ರೈತ ಸಂಘದ ಮಾಜಿ ಅಧ್ಯಕ್ಷ ಮುಗುವಾಳಪ್ಪ, ಸಿ. ಮುನಿಯಪ್ಪನವರು ಸ್ವಾಗತಿಸಿದರು. ಸಿ.ಐ.ಟಿ.ಯು ಅಧ್ಯಕ್ಷರಾದ ಕಾ| ಸೂರ್ಯನಾರಾಯಣರಾವ್ ಅವರು ಸಂಘಟಿತ ಕಾರ್ಮಿಕರ ಪರವಾಗಿ ಸಂದೇಶ ನೀಡಿದರು. ಜಯಘೋಷಗಳೊಡನೆ ಸಭಾಂತ್ಯವಾಯಿತು. ●

ಪರಿಸರ

● ದೇಶದ ಶ್ರೀಮಂತರು ಹೆಚ್ಚು ಶ್ರೀಮಂತರಾಗುತ್ತಿರಬಹುದು ಆದರೆ ಬಡವರೇನೂ ಹೆಚ್ಚು ಬಡವರಾಗುತ್ತಿಲ್ಲ.

—ಪ್ರಧಾನಿ ಇಂದಿರಾ ಗಾಂಧಿ

● ಕರ್ನಾಕಲ್ (ಹರಿಯಾಣ) ನ ಇಟ್ಟಿಗೆ ಗೂಡಿನ ಮಾಲಿಕನೊಬ್ಬ ಸುಮಾರು 16,000 ರೂಗಳಿಗೆ ಹಲವು ಜೀತದಾಳುಗಳನ್ನು ಮಾರಿದ ಬಗ್ಗೆ ಸುಪ್ರಿಂ ಕೋರ್ಟ್ ವರದಿ ಕೇಳಿದಾಗ ಕುರುಕ್ಷೇತ್ರದ ಡೆಪ್ಯುಟಿ ಕಮಿಷನರ್ ಈ ಜೀತದಾಳುಗಳಿಂದ ಬಲಾತ್ಕಾರವಾಗಿ ಖಾಲಿ ಕಾಗದದ ಮೇಲೆ ರುಜು ಹಾಕಿಸಿ ಸುಳ್ಳುವರದಿ ಸಲ್ಲಿಸಿದಾರೆ ಎಂದು ಮಧು ದಂಡವತೆ (ಜನತಾ) ಲೋಕಸಭೆಯಲ್ಲಿಂದು ತಿಳಿಸಿದರು.

— ಇ. ಎನ್. ಎಸ್. ಮಾ. 12

● ತಂಬಾಕು ಬೆಳೆಗಾರರ ಹಿತರಕ್ಷಿಸಿ ಇಡೀ ತಂಬಾಕು ಉದ್ಯಮದ ಮೇಲೆ ಹಿಡಿತ ಇಟ್ಟುಕೊಳ್ಳಲೆಂದು ಸ್ಥಾಪಿಸಲಾದ ತಂಬಾಕು ಮಂಡಲಿ ಗುತ್ತೇದಾರಿ ಕಂಪನಿಗಳು ಹಾಗೂ ರಾಜಕೀಯದ ಉರುಳಿನಲ್ಲಿ ಸಿಕ್ಕಿ ನಿಷ್ಕ್ರಿಯವಾಗಿವೆ.

— ಪ್ರಜಾವಾಣಿ ಮಾ. 15

● ಭಾನುವಾರ ಗಾಜಿನ ಮನೆಯಲ್ಲಿ ಹರಿಜನ ಗಿರಿಜನ ಸಮ್ಮೇಳನ ನಡೆಸಿದ ಬಿ ಜೆ ಪಿ. ಯವರಿಗೆ ಗಾಜಿನ ಮನೆಯ ಗಾದೆ ಗೊತ್ತಿದೆಯೆಂದು ತಿಳಿಯುತ್ತೇವೆ. ಕಾಂಗ್ರೆಸ್ಸಿನ ಬಗೆಗೆ ಆಗಲೇ ಇದು ಗೊತ್ತಾಗಿದೆ.

ಲಂಕೇಶ್ ಪತ್ರಿಕೆ ಮಾ. 14

Printed & Published by P. Ramachandra Rao by him on behalf of the Communist Party of India Marxist) Karnataka State Committee, L-56 K. V. Temple Street Sultanpet, Bangalore 560 053 Editorial and managerial office :L-56, K. V. Temple Street ,Sultanpet, Bangalore 560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. . EDITOR ; M K. BHAT.